# أَذْكَارُ الصَّبَاحِ وَالْمَسَاءِ وَفَضْلِهَا

## ಮುಂಜಾನೆ ಮತ್ತು ಸಂಜೆಯ

# ದಿಕ್ರ್‌ಗಳು

## ಹಾಗೂ ಅದರ ಶ್ರೇಷ್ಠತೆಗಳು

# أَذْكَارُ الصَّبَاحِ وَالْمَسَاءِ وَفَضْلُهَا

## ಮುಂಜಾನೆ ಮತ್ತು ಸಂಜೆಯ

# ದಿಕ್ರ್‌ಗಳು

## ಹಾಗೂ ಅದರ ಶ್ರೇಷ್ಠತೆಗಳು

بِسۡمِ ٱللَّهِ ٱلرَّحۡمَٰنِ ٱلرَّحِيمِ

**“(ತನ್ನ ಸೃಷ್ಟಿಗಳಿಗೆ) ಅಪಾರ ದಯಾಮಯನೂ, (ತನ್ನ ನೈಜ ವಿಶ್ವಾಸಿಗಳಾದ ದಾಸರಿಗೆ) ಸದಾ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ.”**

© ಅಬೂ ಹಮ್ಮಾದ್ ಸಲಾಹುದ್ದೀನ್

ಇದು ಆನ್‌ಲೈನ್ ಬಳಕೆಗಾಗಿ www.AbuHammaad.Com ನಲ್ಲಿ ಪ್ರಕಟಿಸಲಾದ ಒಂದು ಎಲೆಕ್ಟ್ರಾನಿಕ್ ಪ್ರಕಾಶನವಾಗಿದೆ. ಈ ಪುಸ್ತಕವನ್ನು ನಿಮ್ಮ ವೈಯಕ್ತಿಕ ಬಳಕೆಗಾಗಿ ನೀವು ಮುದ್ರಿಸಬಹುದು. ಮಾರಾಟದ ಉದ್ದೇಶಕ್ಕಾಗಿ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಈ ಪ್ರಕಾಶನವನ್ನು ನೀವು ಪ್ರಸಾರಮಾಡಲು ಇಚ್ಛಿಸುವುದಾದರೆ, ಇದರ ಲಿಂಕನ್ನು www.AbuHammaad.Com ನಿಂದ ನೀವು ಪ್ರಸಾರಮಾಡಬಹುದಾಗಿದೆ. ಅನುಮತಿಯಿಲ್ಲದೆ ಇದನ್ನು ನಕಲಿಸುವುದನ್ನು ಅಥವಾ ಬದಲಾಯಿಸುವುದನ್ನು ನಿಷೇಧಿಸಲಾಗಿದೆ, ಅದು ಹಕ್ಕುಸ್ವಾಮ್ಯದ ಉಲ್ಲಂಘನೆಯಾಗಿದೆ.

**ಶೀರ್ಷಿಕೆ :** ಮುಂಜಾನೆ ಮತ್ತು ಸಂಜೆಯ ದಿಕ್ರ್‌ಗಳು ಹಾಗೂ ಅದರ ಶ್ರೇಷ್ಠತೆಗಳು.

**ಸಂಗ್ರಹ :** ಅಬೂ ತಲ್‌ಹಾ ದಾವೂದ್ ಬರ್‌ಬ್ಯಾಂಕ್ (رَحِمَهُ ٱللَّهُ)

**ಅನುವಾದ :** ಅಬೂ ಹಮ್ಮಾದ್ ಸಲಾಹುದ್ದೀನ್

**ಮೊದಲ ಆವೃತ್ತಿ :** 01 ಏಪ್ರಿಲ್, 2020 / 08 ಶಅ್‌ಬಾನ್, 1441

**ವೆಬ್‌ಸೈಟ್ :** www.AbuHammaad.Com

**ಇ–ಮೇಲ್ :** info@AbuHammaad.Com

**ದೂರವಾಣಿ :** 9606627997

## ಪರಿವಿಡಿ


ದಿಕ್ರ್‌ಗಳು ಭದ್ರವಾದ ಕೋಟೆಯಾಗಿದೆ ................................ 04

ದಿಕ್ರ್‌ಗಳನ್ನು ಹೇಳುವ ಸಮಯ ........................................ 05

ಮುಂಜಾನೆಯ ದಿಕ್ರ್‌ಗಳು .................................................. 06

ಸಂಜೆಯ ದಿಕ್ರ್‌ಗಳು ........................................................ 23

ಸದಾ ಹೇಳಬೇಕಾದ ದುಆಗಳು ........................................ 38

ಮುಂಜಾನೆ ಮತ್ತು ಸಂಜೆಯ ದಿಕ್ರ್‌ಗಳಿಗಿರುವ ಪುರಾವೆಗಳು 39

## ದಿಕ್ರ್‌ಗಳು ಭದ್ರವಾದ ಕೋಟೆಯಾಗಿದೆ...

ಅಶ್ಶೈಖ್ ಸಾಲಿಹ್ ಅಲ್-ಉಸೈಮೀನ್ (رَحِمَهُ ٱللَّٰهُ) ಹೇಳಿದರು : "(ದೈನಂದಿನ) ದಿಕ್ರ್‌ಗಳು ಭದ್ರವಾದ ಕೋಟೆಯಾಗಿದೆ ಅದು ಯಅ್‌ಜೂಜ್ ಮತ್ತು ಮಅ್‌ಜೂಜ್‌ರ ತಡೆಗೋಡೆಗಿಂತಲೂ ಬಲಿಷ್ಠವಾಗಿದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಆದರೆ ಬೇಸರದ ಸಂಗತಿಯೆಂದರೆ ಬಹಳಷ್ಟು ಜನರು ಈ ದಿಕ್ರ್‌ಗಳ ಬಗ್ಗೆ ಏನೂ ತಿಳಿದಿಲ್ಲ, ಯಾರು ತಿಳಿದಿರುವರೋ ಅವರಲ್ಲಿ ಹೆಚ್ಚಿನವರು ಇದನ್ನು ನಿರ್ಲಕ್ಷಿಸುತ್ತಾರೆ, ಇನ್ನು ಯಾರು ಅದನ್ನು ಓದುವರೋ ಅವರು ತಮ್ಮ ಹೃದಯವನ್ನು ಅದರೆಡೆಗೆ ಗಮನ ಕೊಡದೆ ಅಲಕ್ಷ್ಯರಾಗಿ ಓದುತ್ತಾರೆ. ಇವೆಲ್ಲವೂ ನ್ಯೂನತೆಗಳಾಗಿವೆ. ಒಂದು ವೇಳೆ ಜನರು ಶರೀಅತ್‌ನಲ್ಲಿ ಹೇಳಿದಂತೆ ದಿಕ್ರ್‌ಗಳನ್ನು ಪಠಿಸುತ್ತಿದ್ದರೆ ಖಂಡಿತವಾಗಿಯೂ ಅವರು ಅನೇಕ ಕೇಡುಗಳಿಂದ ಸುರಕ್ಷತೆಯನ್ನು ಪಡೆದುಕೊಳ್ಳುತ್ತಿದ್ದರು."[1]

---

1. ತಫ್ಸೀರ್ ಜುಝ್‌ಅ್ ಅಮ್ಮ, ಸೂರಃ ಅಲ್-ಫಲಕ್ : 358

## ಮುಂಜಾನೆ ಮತ್ತು ಸಂಜೆಯ ದಿಕ್ರ್‌ಗಳನ್ನು ಹೇಳುವ ಸಮಯ

ಇಮಾಮ್ ಇಬ್ನುಲ್ ಖಯ್ಯಿಮ್ (رَحِمَهُ ٱللَّٰهُ) ಹೇಳಿದರು : "ಇವುಗಳನ್ನು (ಈ ದಿಕ್ರ್‌ಗಳನ್ನು) ಹೇಳುವ ಸಮಯವು, ಮುಂಜಾನೆ (ಸುಬ್‌ಹಿ) ಮತ್ತು ಸೂರ್ಯೋದಯದ ನಡುವೆಯಾಗಿದೆ ಹಾಗೂ ಅಸ್ರ್ ಮತ್ತು ಸೂರ್ಯಾಸ್ತದ ನಡುವೆಯಾಗಿದೆ."[2]

2. ಅಲ್–ವಾಬಿಲ್ ಅಸ್–ಸಯ್ಯಿಬ್ : 127

## ಮುಂಜಾನೆಯ ದಿಕ್ರ್‌ಗಳು

1. ಒಂದು ಬಾರಿ :

« اللَّهُمَّ أَنْتَ رَبِّي لاَ إِلَهَ إِلَّا أَنْتَ، خَلَقْتَنِي وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ لَكَ بِذَنْبِي فَاغْفِرْ لِي، فَإِنَّهُ لاَ يَغْفِرُ الذُّنُوبَ إِلَّا أَنْتَ »

**ಅರ್ಥ :** "ಓ ಅಲ್ಲಾಹ್! ನೀನು ನನ್ನ ರಬ್ಬ್ ಆಗಿರುವೆ; ನಿನ್ನ ಹೊರತು ಆರಾಧನೆಗೆ ಅರ್ಹನು ಯಾರೂ ಇಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ ಹಾಗೂ ನಾನು ನಿನ್ನ ದಾಸನಾಗಿರುವೆನು. ನನಗೆ ಸಾಧ್ಯವಾದಷ್ಟು ಮಟ್ಟಿಗೆ ನಿನ್ನ ಕರಾರನ್ನು ಪೂರೈಸಲು ನಾನು ಬದ್ಧನಾಗಿರುವೆನು ಹಾಗೂ (ಅಂತ್ಯದಿನದ) ನಿನ್ನ ವಾಗ್ದಾನದ ಬಗ್ಗೆ ನಾನು ದೃಢನಾಗಿರುವೆನು. ನಾನು ಎಸಗಿರುವುದರ ಕೇಡಿನಿಂದ ನಾನು ನಿನ್ನಲ್ಲಿ ಅಭಯವನ್ನು ಯಾಚಿಸುವೆನು, ನೀನು ನನ್ನ ಮೇಲೆ ದಯಪಾಲಿಸಿದ ಸರ್ವ ಅನುಗ್ರಹಗಳನ್ನು ನಾನು ನಿನ್ನ ಮುಂದೆ

ಅಂಗೀಕರಿಸುವೆನು, ನನ್ನ ಸರ್ವ ಪಾಪಗಳನ್ನು ನಿನ್ನ ಬಳಿ ನಾನು ತಪ್ಪೊಪ್ಪಿಕೊಳ್ಳುವೆನು. ಹಾಗಾಗಿ ನನ್ನನ್ನು ಕ್ಷಮಿಸು, ಏಕೆಂದರೆ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರು ಯಾರೂ ಇಲ್ಲ."[3]

2. ಒಂದು ಬಾರಿ :

« أَصْبَحْنَا وَأَصْبَحَ الْمُلْكُ لِلَّهِ وَالْحَمْدُ لِلَّهِ لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ، رَبِّ أَسْأَلُكَ خَيْرَ مَا فِي هَذَا الْيَوْمِ وَخَيْرَ مَا بَعْدَهُ وَأَعُوذُ بِكَ مِنْ شَرِّ مَا فِي هَذَا الْيَوْمِ وَشَرِّ مَا بَعْدَهُ، رَبِّ أَعُوذُ بِكَ مِنَ الْكَسَلِ وَسُوءِ الْكِبَرِ، رَبِّ أَعُوذُ بِكَ مِنْ عَذَابٍ فِي النَّارِ وَعَذَابٍ فِي الْقَبْرِ »

**ಅರ್ಥ :** "ನಾವು ಮುಂಜಾನೆಯನ್ನು ಪ್ರವೇಶಿಸಿದೆವು, ಹಾಗೂ ಅಲ್ಲಾಹುವಿಗೆ ಮಾತ್ರವಾಗಿರುವ ಸಕಲ ಆಧಿಪತ್ಯವು ಮುಂಜಾನೆಯ

3. ಈ ದುಆಗಳ ಪುರಾವೆಗಳನ್ನು ಪುಸ್ತಕದ ಕೊನೆಯ ಭಾಗದಲ್ಲಿ "ಮುಂಜಾನೆ ಮತ್ತು ಸಂಜೆಯ ದಿಕ್ರ್‌ಗಳಿಗಿರುವ ಪುರಾವೆಗಳು" ಎಂಬ ಶೀರ್ಷಿಕೆಯಡಿ ನೀಡಲಾಗಿದೆ. ನೋಡಿರಿ, ಪುರಾವೆ ಸಂಖ್ಯೆ : 1

ಹೊತ್ತನ್ನು ಪ್ರವೇಶಿಸಿದೆ, ಸರ್ವಸ್ತುತಿಗಳು ಅಲ್ಲಾಹುವಿಗೆ ಮೀಸಲು. ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನಾಗಿರುವನು ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು. ಓ ನನ್ನ ರಬ್ಬ್! ಈ ದಿನದಲ್ಲಿ ಅಡಕವಾಗಿರುವ ಒಳಿತನ್ನು ಹಾಗೂ ಇದರ ನಂತರ ಬರುವ (ದಿನಗಳಲ್ಲಿ ಅಡಕವಾಗಿರುವ) ಒಳಿತನ್ನು ನಾನು ನಿನ್ನೊಂದಿಗೆ ಯಾಚಿಸುತ್ತೇನೆ, ಹಾಗೂ ಈ ದಿನದಲ್ಲಿ ಅಡಕವಾಗಿರುವ ಕೆಡುಕಿನಿಂದ ಹಾಗೂ ಇದರ ನಂತರ ಬರುವ (ದಿನಗಳಲ್ಲಿ ಅಡಕವಾಗಿರುವ) ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷಣೆಯನ್ನು ಬೇಡುತ್ತೇನೆ. ಓ ನನ್ನ ರಬ್ಬ್! ಸೋಮಾರಿತನದಿಂದ ಹಾಗೂ ವೃದ್ಧಾಪ್ಯ ದೌರ್ಬಲ್ಯದಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ. ಓ ನನ್ನ ರಬ್ಬ್! ನರಕಾಗ್ನಿಯ ಶಿಕ್ಷೆಯಿಂದಲೂ ಹಾಗೂ ಕಬ್‌ರಿನ (ಗೋರಿಯ) ಶಿಕ್ಷೆಯಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ."[4]

4. ನೋಡಿರಿ, ಪುರಾವೆ ಸಂಖ್ಯೆ : 2 (ii)

www.AbuHammaad.Com

3. ಮೂರು ಬಾರಿ :

« سُبْحَانَ اللهِ وَبِحَمْدِهِ، عَدَدَ خَلْقِهِ وَرِضَا نَفْسِهِ وَزِنَةَ عَرْشِهِ وَمِدَادَ كَلِمَاتِهِ »

**ಅರ್ಥ :** "ಅಲ್ಲಾಹುವನ್ನು ಸ್ತುತಿಸುವುದರೊಂದಿಗೆ ಸರ್ವ ನ್ಯೂನತೆಗಳಿಂದಲೂ ಅಲ್ಲಾಹು ಮುಕ್ತನಾಗಿರುವನು ಎಂದು ಅರಿತುಕೊಂಡು, ಅವನ ಪರಿಶುದ್ಧತೆಯನ್ನು ಕೊಂಡಾಡುತ್ತೇನೆ. (ಅದು) ಅವನ ಸೃಷ್ಟಿಗಳ ಸಂಖ್ಯೆಯಷ್ಟು, ಅವನು ಸ್ವತಃ ತೃಪ್ತಿ ಹೊಂದಿದಷ್ಟು, ಅವನ ಅರ್ಶ್‌ನ (ಸಿಂಹಾಸನದ) ಭಾರದಷ್ಟು, ಅವನ ವಚನವು ಅಧಿಕವಾಗಿರುವಷ್ಟು."[5]

4. ನೂರು ಬಾರಿ :

« سُبْحَانَ اللهِ وَبِحَمْدِهِ »

5. ನೋಡಿರಿ, ಪುರಾವೆ ಸಂಖ್ಯೆ : 3

www.AbuHammaad.Com

**ಅರ್ಥ** : "ಅಲ್ಲಾಹುವನ್ನು ಸ್ತುತಿಸುವುದರೊಂದಿಗೆ ಸರ್ವ ನ್ಯೂನತೆಗಳಿಂದಲೂ ಅಲ್ಲಾಹು ಮುಕ್ತನಾಗಿರುವನು ಎಂದು ಅರಿತುಕೊಂಡು, ಅವನ ಪರಿಶುದ್ಧತೆಯನ್ನು ಕೊಂಡಾಡುತ್ತೇನೆ." [6]

5. ಮೂರು ಬಾರಿ : ಸೂರಃ ಅಲ್-ಇಖ್ಲಾಸ್, ಸೂರಃ ಅಲ್-ಫಲಕ್, ಸೂರಃ ಅನ್ನಾಸ್ [7]

﴿قُلْ هُوَ ٱللَّهُ أَحَدٌ ۝١ ٱللَّهُ ٱلصَّمَدُ ۝٢ لَمْ يَلِدْ وَلَمْ يُولَدْ ۝٣ وَلَمْ يَكُن لَّهُۥ كُفُوًا أَحَدٌۢ ۝٤﴾

**ಅರ್ಥ** : "(ಅಚಲ ದೃಢವಿಶ್ವಾಸದೊಂದಿಗೆ) ಹೇಳಿರಿ, ಅವನು ಅಲ್ಲಾಹು (ಆತನ ಪರಿಪೂರ್ಣ ನಾಮಗಳಲ್ಲಿ, ಗುಣವಿಶೇಷಣೆಗಳಲ್ಲಿ, ಕ್ರಿಯೆಗಳಲ್ಲಿ ಮತ್ತು ಆರಾಧನೆಯ ಅರ್ಹತೆಯಲ್ಲಿ) ಏಕಮೇವನಾಗಿರುವನು. ಅಲ್ಲಾಹು ತನ್ನ ಎಲ್ಲಾ ಸೃಷ್ಟಿಗಳ ಅಗತ್ಯಗಳಿಂದ ಮುಕ್ತನಾಗಿರುವನು ಹಾಗೂ ಸರ್ವರೂ

---

6. ನೋಡಿರಿ, ಪುರಾವೆ ಸಂಖ್ಯೆ : 4
7. ನೋಡಿರಿ, ಪುರಾವೆ ಸಂಖ್ಯೆ : 5

www.AbuHammaad.Com

ಅವನ ಆಶ್ರಿತರಾಗಿರುವರು. ಅವನು ಯಾರಿಗೂ ಜನ್ಮವನ್ನು ನೀಡಿಲ್ಲ ಹಾಗೂ ಅವನು ಯಾರಿಗೂ ಜನಿಸಿದವನೂ ಅಲ್ಲ. (ಆತನ ಪರಿಪೂರ್ಣ ನಾಮಗಳಲ್ಲಿ, ಗುಣವಿಶೇಷಣೆಗಳಲ್ಲಿ, ಮತ್ತು ಕ್ರಿಯೆಗಳಲ್ಲಿ) ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ.”[8]

﴿قُلْ أَعُوذُ بِرَبِّ ٱلْفَلَقِ ۝١ مِن شَرِّ مَا خَلَقَ ۝٢ وَمِن شَرِّ غَاسِقٍ إِذَا وَقَبَ
۝٣ وَمِن شَرِّ ٱلنَّفَّٰثَٰتِ فِى ٱلْعُقَدِ ۝٤ وَمِن شَرِّ حَاسِدٍ إِذَا حَسَدَ ۝٥﴾

**ಅರ್ಥ :** “ಹೇಳಿರಿ : ಪ್ರಭಾತದ ರಬ್ಬ್[9]ನೊಂದಿಗೆ ನಾನು ರಕ್ಷಣೆ ಬೇಡುತ್ತೇನೆ. ಅವನು ಸೃಷ್ಟಿಸಿದವುಗಳಲ್ಲಿರುವ (ಎಲ್ಲಾ) ಕೇಡಿನಿಂದ. ಹಾಗೂ (ರಾತ್ರಿಯ) ಕತ್ತಲೆಯು ಆವರಿಸಿಕೊಂಡಾಗ ಅದರ (ಇರುಳಿನಲ್ಲಿ ಉದ್ಭವಿಸುವ) ಕೇಡಿನಿಂದ. ಮತ್ತು ಗಂಟುಗಳಲ್ಲಿ (ಮಂತ್ರಿಸಿ) ಊದುವ ಮಾಟಗಾತಿಯರ ಕೇಡಿನಿಂದ. ಹಾಗೂ

8. ಸೂರಃ ಅಲ್–ಇಖ್ಲಾಸ್ : 1–4

9. ಅರ್–ರಬ್ಬ್ ಅಂದರೆ ಸಕಲ ವಸ್ತುಗಳ ಸೃಷ್ಟಿಕರ್ತನೂ, ಒಡೆಯನೂ ಹಾಗೂ ಎಲ್ಲಾ ಕಾರ್ಯಗಳನ್ನು ನಿಯಂತ್ರಿಸುವವನು ಎಂದರ್ಥ.

ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಲ್ಲಾಹುವಿನೊಂದಿಗೆ ರಕ್ಷಣೆ ಬೇಡುತ್ತೇನೆ)."[10]

﴿قُلْ أَعُوذُ بِرَبِّ ٱلنَّاسِ ۝١ مَلِكِ ٱلنَّاسِ ۝٢ إِلَٰهِ ٱلنَّاسِ ۝٣ مِن شَرِّ ٱلْوَسْوَاسِ ٱلْخَنَّاسِ ۝٤ ٱلَّذِى يُوَسْوِسُ فِى صُدُورِ ٱلنَّاسِ ۝٥ مِنَ ٱلْجِنَّةِ وَٱلنَّاسِ ۝٦﴾

**ಅರ್ಥ :** "ಹೇಳಿರಿ : ಮನುಷ್ಯರ ರಬ್ಬ್‌ನೊಂದಿಗೆ ನಾನು ರಕ್ಷಣೆ ಬೇಡುತ್ತೇನೆ, ಮನುಷ್ಯರ ಅಧಿಪತಿಯೂ, ಮನುಷ್ಯರ (ಏಕೈಕ) ನೈಜ ಆರಾಧ್ಯನೂ (ಆದ ಅಲ್ಲಾಹುವಿನೊಂದಿಗೆ), (ಮನುಷ್ಯರು ಅಲ್ಲಾಹುವನ್ನು ಸ್ಮರಿಸುವ ವೇಳೆ ನಿರಂತರವಾಗಿ) ಹಿಂದೆ ಸರಿಯುವ, (ಮತ್ತು ಅಲ್ಲಾಹುವಿನ ಬಗ್ಗೆ ಅಲಕ್ಷ್ಯರಾಗಿದ್ದಾಗ ಸತತವಾಗಿ) ದುಷ್ಪ್ರೇರಣೆಯನ್ನು ಉಂಟು ಮಾಡುವ ಆತನ ಕೇಡಿನಿಂದ (ಅರ್ಥಾತ್ ಶೈತಾನ್‌ನ ಕೇಡಿನಿಂದ). ಅವನು ಮನುಷ್ಯರ ಹೃದಯಗಳಲ್ಲಿ (ದುರಾಲೋಚನೆ, ಗೊಂದಲ ಹಾಗೂ

---

10. ಸೂರಃ ಅಲ್-ಫಲಕ್ : 1–5

www.AbuHammaad.Com

ದೇಹೇಚ್ಛೆಗಳನ್ನು ಬಿತ್ತಿ) ದುಷ್ಪ್ರೇರಣೆ ಉಂಟುಮಾಡುತ್ತಾನೆ. (ಹೀಗೆ ಮನುಷ್ಯರ ಹೃದಯಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನು) ಜಿನ್ನ್ ವರ್ಗದಿಂದಲೂ (ಆಗಿರಬಹುದು) ಮತ್ತು ಮನುಷ್ಯ ವರ್ಗದಿಂದಲೂ (ಆಗಿರಬಹುದು)."[11]

6. ಒಂದು ಬಾರಿ

« اللَّهُمَّ بِكَ أَصْبَحْنَا وَبِكَ أَمْسَيْنَا وَبِكَ نَحْيَا وَبِكَ نَمُوتُ وَإِلَيْكَ النُّشُورُ »

**ಅರ್ಥ** : "ಓ ಅಲ್ಲಾಹ್! ನಿನ್ನ ನೆರವಿನೊಂದಿಗೆ ನಾವು ಮುಂಜಾನೆಯನ್ನು ಪ್ರವೇಶಿಸಿದೆವು, ಹಾಗೂ ನಿನ್ನ ನೆರವಿನೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ನಿನ್ನಿಂದಲೇ ನಾವು ಜೀವಿಸುತ್ತಿರುವೆವು, ನಿನ್ನಿಂದಲೇ ನಾವು ಮರಣ ಹೊಂದುವೆವು, ಹಾಗೂ ಪುನರುತ್ಥಾನವು ನಿನ್ನೆಡೆಗಾಗಿದೆ."[12]

---

11. ಸೂರಃ ಅನ್ನಾಸ್ : 1–6

12. ನೋಡಿರಿ, ಪುರಾವೆ ಸಂಖ್ಯೆ : 6 (i)

7. ಮೂರು ಬಾರಿ :

« بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ، فِي الْأَرْضِ، وَلَا فِي السَّمَاءِ، وَهُوَ السَّمِيعُ الْعَلِيمُ »

**ಅರ್ಥ :** "ಯಾರ ನಾಮವು ಉಚ್ಚರಿಸಲ್ಪಟ್ಟರೆ ಭೂಮಿಯಲ್ಲಿರುವುದಾಗಲೀ ಅಥವಾ ಆಕಾಶದಲ್ಲಿರುವುದಾಗಲೀ ಯಾವುದೂ ಹಾನಿಯುಂಟುಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹುವಿನ ನಾಮದಿಂದ (ನಾನು ರಕ್ಷೆ ಮತ್ತು ಸಹಾಯವನ್ನು ಯಾಚಿಸುತ್ತೇನೆ). ಅವನು ಎಲ್ಲವನ್ನು ಆಲಿಸುವವನೂ, ಎಲ್ಲದರ ಕುರಿತು ಅರಿವುಳ್ಳವನೂ ಆಗಿದ್ದಾನೆ."[13]

8. ಒಂದು ಬಾರಿ :

« اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ، اللَّهُمَّ إِنِّي أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ وَأَهْلِي وَمَالِي، اللَّهُمَّ اسْتُرْ عَوْرَاتِي

13. ನೋಡಿರಿ, ಪುರಾವೆ ಸಂಖ್ಯೆ : 7

www.AbuHammaad.Com

وَآمِنْ رَوْعَاتِي، اللَّهُمَّ احْفَظْنِي مِنْ بَيْنِ يَدَيَّ، وَمِنْ خَلْفِي، وَعَنْ يَمِينِي، وَعَنْ شِمَالِي، وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي »

**ಅರ್ಥ :** "ಓ ಅಲ್ಲಾಹ್! ಇಹಲೋಕದಲ್ಲೂ ಪರಲೋಕದಲ್ಲೂ (ಸಕಲ ಕೇಡುಗಳಿಂದ) ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ನಾನು ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ದೀನ್‌ನಲ್ಲೂ, ನನ್ನ ಐಹಿಕ ಜೀವನದಲ್ಲೂ, ನನ್ನ ಕುಟುಂಬ ಮತ್ತು ಸಂಪತ್ತಿನಲ್ಲೂ ಕ್ಷಮೆ, ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ನ್ಯೂನತೆ ಮತ್ತು ತಪ್ಪುಗಳನ್ನು ಮರೆಮಾಡು ಮತ್ತು (ಸುರಕ್ಷತೆಯನ್ನು ನೀಡುವ ಮೂಲಕ) ನನ್ನ ಭಯವನ್ನು ನೀಗಿಸು. ಓ ಅಲ್ಲಾಹ್! ನನ್ನ ಮುಂದಿನಿಂದಲೂ ಹಾಗೂ ಹಿಂದಿನಿಂದಲೂ, ನನ್ನ ಬಲದಿಂದಲೂ ಹಾಗೂ ಎಡದಿಂದಲೂ, ನನ್ನ ಮೇಲಿನಿಂದಲೂ ನನ್ನನ್ನು ಸಂರಕ್ಷಿಸು. ನನ್ನ ಕೆಳಭಾಗದಿಂದ ಹಠಾತ್ತನೇ (ಹಿಡಿಯಲ್ಪಟ್ಟು ಅಲಕ್ಷ್ಯನಾಗಿ) ನಾಶಹೊಂದುವುದರಿಂದ ನಿನ್ನ ಮಹಿಮೆಯೊಂದಿಗೆ ನಾನು ಅಭಯ ಯಾಚಿಸುತ್ತೇನೆ." [14]

14. ನೋಡಿರಿ, ಪುರಾವೆ ಸಂಖ್ಯೆ : 8

www.AbuHammaad.Com

9. ಒಂದು ಬಾರಿ ಅಥವಾ ಹತ್ತು ಬಾರಿ ಅಥವಾ ನೂರು ಬಾರಿ :

«لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ»

**ಅರ್ಥ :** "ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನೂ ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು." [15]

10. ಒಂದು ಬಾರಿ :

«اللَّهُمَّ فَاطِرَ السَّمَوَاتِ وَالأَرْضِ عَالِمَ الغَيْبِ وَالشَّهَادَةِ لَا إِلَهَ إِلَّا أَنْتَ رَبَّ كُلِّ شَيْءٍ وَمَلِيكَهُ، أَعُوذُ بِكَ مِنْ شَرِّ نَفْسِي، وَمِنْ شَرِّ

15. ನೋಡಿರಿ, ಪುರಾವೆ ಸಂಖ್ಯೆ : 9 (i), (ii), (iii)

www.AbuHammaad.Com

الشَّيْطَانِ وَشِرْكِهِ، وَأَنْ أَقْتَرِفَ عَلَى نَفْسِي سُوءًا أَوْ أَجُرَّهُ إِلَى مُسْلِمٍ »

**ಅರ್ಥ** : "ಓ ಅಲ್ಲಾಹ್! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಅಗೋಚರ ಹಾಗೂ ಗೋಚರವಾಗಿರುವುದರ ಕುರಿತು ಅರಿವುಳ್ಳವನೇ, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ. ಸಕಲ ವಸ್ತುಗಳ ಸೃಷ್ಟಿಕರ್ತನೂ, ಒಡೆಯನೂ, ಪರಿಪಾಲಕನೂ ಹಾಗೂ ಅವೆಲ್ಲದರ ಪರಮ ಅಧಿಪತಿಯೇ! ನನ್ನ ಮನಸ್ಸಿನ ಕೆಡುಕಿನಿಂಲೂ ಮತ್ತು ಶೈತಾನ್‌ನ ಕೆಡುಕಿನಿಂದಲೂ ಹಾಗೂ ಅವನು ಆಹ್ವಾನ ನೀಡುವ ಶಿರ್ಕ್‌ನಿಂದಲೂ (ಅಲ್ಲಾಹುವಿನೊಂದಿಗೆ ಇತರರನ್ನು ಸಹಭಾಗಿಗಳಾಗಿ ಮಾಡಲು ಶೈತಾನ್ ನೀಡುವ ಕರೆಯಿಂದಲೂ); ನನ್ನ ಸ್ವಂತದ ವಿರುದ್ಧವೆಸಗುವ ಕೆಡುಕಿನಿಂದಲೂ ಅಥವಾ ಅದನ್ನು ಓರ್ವ ಮುಸ್ಲಿಮ್‌ನ ಮೇಲೆ ಎಸಗುವುದರಿಂದಲೂ ನಾನು ನಿನ್ನಲ್ಲಿ ಅಭಯ ಯಾಚಿಸುತ್ತೇನೆ." [16]

16. ನೋಡಿರಿ, ಪುರಾವೆ ಸಂಖ್ಯೆ : 10

11. ಒಂದು ಬಾರಿ :

« يَا حَيُّ يَا قَيُّومُ بِرَحْمَتِكَ أَسْتَغِيثُ، أَصْلِحْ لِي شَأْنِي كُلَّهُ، وَلَا تَكِلْنِي إِلَى نَفْسِي طَرْفَةَ عَيْنٍ »

**ಅರ್ಥ :** "ಓ ಸದಾ ಜೀವಂತನಾಗಿರುವವನೇ! ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೇ! (ಓ ಅಲ್ಲಾಹ್!) ನಿನ್ನ ಕಾರುಣ್ಯದೊಂದಿಗೆ ನಾನು ಸಹಾಯ ಯಾಚಿಸುತ್ತಿದ್ದೇನೆ. ನನ್ನ ಸರ್ವ ಕಾರ್ಯಗಳನ್ನು ನನಗೆ ನೀನು ಸರಿಪಡಿಸು, ಕಣ್ಣಿನ ಮಿಟುಕಿನಷ್ಟು ಕ್ಷಣವೂ ಸ್ವತಃ ನನ್ನನ್ನೇ ನಾನು ಅವಲಂಬಿಸುವಂತೆ ನೀನು ಮಾಡದಿರು."[17]

12. ಮೂರು ಬಾರಿ :

« أَصْبَحْتُ أُثْنِي عَلَيْكَ حَمْدًا، وَأَشْهَدُ أَنْ لَا إِلَهَ إِلَّا اللهُ »

17. ನೋಡಿರಿ, ಪುರಾವೆ ಸಂಖ್ಯೆ : 11

www.AbuHammaad.Com

**ಅರ್ಥ :** "ನಿನ್ನನ್ನು ಪ್ರಶಂಸಿಸುತ್ತಾ ನಾನು ಮುಂಜಾನೆಯನ್ನು ಪ್ರವೇಶಿಸಿದೆನು, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುವೆನು."[18]

13. ಒಂದು ಬಾರಿ :

﴿ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا تَأۡخُذُهُۥ سِنَةٞ وَلَا نَوۡمٞۚ لَّهُۥ مَا فِي
ٱلسَّمَٰوَٰتِ وَمَا فِي ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا بِإِذۡنِهِۦۚ يَعۡلَمُ مَا بَيۡنَ
أَيۡدِيهِمۡ وَمَا خَلۡفَهُمۡۖ وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا شَآءَۚ وَسِعَ كُرۡسِيُّهُ
ٱلسَّمَٰوَٰتِ وَٱلۡأَرۡضَۖ وَلَا يَـُٔودُهُۥ حِفۡظُهُمَاۚ وَهُوَ ٱلۡعَلِيُّ ٱلۡعَظِيمُ ٢٥٥﴾

**ಅರ್ಥ :** "ಅಲ್ಲಾಹು, ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ; ಅವನು ಸದಾ ಜೀವಿಸುವವನೂ ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೂ ಆಗಿರುವನು. ತೂಕಡಿಕೆಯಾಗಲೀ ನಿದ್ರೆಯಾಗಲೀ

18. ನೋಡಿರಿ, ಪುರಾವೆ ಸಂಖ್ಯೆ : 12

ಅವನನ್ನು ಬಾಧಿಸದು. ಆಕಾಶಗಳಲ್ಲಿರುವುದೂ ಭೂಮಿಯಲ್ಲಿರುವುದೂ (ಸಕಲವೂ) ಅವನಿಗೆ ಸೇರಿದ್ದಾಗಿದೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸು ಮಾಡುವವನು ಯಾರು? ಅವರ ಮುಂದಿರುವ ಹಾಗೂ ಅವರ ಹಿಂದಿರುವ (ಹಿಂದೆ ನಡೆದು ಹೋಗಿರುವ ಹಾಗೂ ಮುಂದೆ ಸಂಭವಿಸಲಿರುವ) ಸಕಲವನ್ನೂ ಅವನು ಅರಿಯುತ್ತಾನೆ, ಅವನು ಏನನ್ನು (ಕಲಿಸಿಕೊಡಲು) ಇಚ್ಚಿಸುತ್ತಾನೋ ಅದರ ಹೊರತು ಅವನ ಅರಿವಿನಿಂದ ಯಾವುದನ್ನೂ ಅವರು ಅರಿಯಲಾರರು. ಅವನ ಕುರ್ಸೀ (ಅಲ್ಲಾಹುವಿನ ಎರಡು ಪಾದಗಳ ಸ್ಥಳ) ಆಕಾಶಗಳ ಮತ್ತು ಭೂಮಿಯ ಮೇಲೆ ವ್ಯಾಪಿಸಿಕೊಂಡಿದೆ, ಅವೆರಡನ್ನು (ಆಕಾಶಗಳು ಮತ್ತು ಭೂಮಿಯನ್ನು) ಸಂರಕ್ಷಿಸುವುದು ಅವನಿಗೆ ಹೊರೆಯಾಗದು. ಅವನು ಪರಮೋನ್ನತನೂ ಅತ್ಯುನ್ನತ ಮಹಿಮೆಯನ್ನು ಹೊಂದಿರುವವನೂ ಆಗಿರುವನು.” [19]

19. ಸೂರಃ ಅಲ್–ಬಕರಃ : 255; ನೋಡಿರಿ, ಪುರಾವೆ ಸಂಖ್ಯೆ : 13

www.AbuHammaad.Com

14. ಒಂದು ಬಾರಿ :

«أَصْبَحْنَا عَلَى فِطْرَةِ الْإِسْلَامِ، وَكَلِمَةِ الْإِخْلَاصِ وَدِينِ نَبِيِّنَا مُحَمَّدٍ صَلَّى اللهُ عَلَيْهِ وَسَلَّمَ، وَمِلَّةِ أَبِينَا إِبْرَاهِيمَ، حَنِيفًا مُسْلِمًا وَمَا كَانَ مِنَ الْمُشْرِكِينَ»

**ಅರ್ಥ :** "ನಾವು ಮುಂಜಾನೆಯನ್ನು ಪ್ರವೇಶಿಸಿದೆವು – ಇಸ್ಲಾಮ್‌ನ ನೈಜ ಧರ್ಮದಲ್ಲಿ, ಆರಾಧನೆಯನ್ನು (ಅಲ್ಲಾಹುವಿಗೆ ಮಾತ್ರ) ನಿಷ್ಕಳಂಕತೆಗೊಳಿಸುವ (ಲಾ ಇಲಾಹ ಇಲ್ಲಲ್ಲಾಹ್ ಎಂಬ ತೌಹೀದ್‌ನ) ಸಾಕ್ಷ್ಯವಚನದಲ್ಲಿ, ನಮ್ಮ ಪ್ರವಾದಿವರ್ಯರಾದ ಮುಹಮ್ಮದ್ (ﷺ) ರವರ ಧರ್ಮದಲ್ಲಿ, ನಮ್ಮ ಪೂರ್ವಜರಾದ ಇಬ್ರಾಹೀಮ್ (عَلَيْهِ السَّلَامُ) ರವರ ಮಾರ್ಗದಲ್ಲಿ– ಅವರು ಅಲ್ಲಾಹುವನ್ನು ಏಕಮಾತ್ರವಾಗಿ ಆರಾಧಿಸುವ ನೈಜ ಧರ್ಮದಲ್ಲಿದ್ದರು (ಇಸ್ಲಾಮ್‌ನಲ್ಲಿದ್ದರು) ಹಾಗೂ ಅವರು ಅಲ್ಲಾಹುವಿನೊಂದಿಗೆ ಆರಾಧನೆಯಲ್ಲಿ ಇತರರನ್ನು ಸಹಭಾಗಿಗಳಾಗಿ ಮಾಡುವವರ ಪೈಕಿ (ಮುಶ್ರಿಕ್‌ಗಳ ಪೈಕಿ) ಸೇರಿದವರಾಗಿರಲಿಲ್ಲ." [20]

20. ನೋಡಿರಿ, ಪುರಾವೆ ಸಂಖ್ಯೆ : 14

15. ಒಂದು ಬಾರಿ :

« رَضِيتُ بِاللهِ رَبًّا، وَبِالْإِسْلَامِ دِينًا، وَبِمُحَمَّدٍ نَبِيًّا »

**ಅರ್ಥ :** "ಅಲ್ಲಾಹು ನನ್ನ ರಬ್ಬ್ ಆಗಿಯೂ, ಇಸ್ಲಾಮ್ ನನ್ನ ಧರ್ಮವಾಗಿಯೂ ಹಾಗೂ ಮುಹಮ್ಮದ್ (ﷺ) ನನ್ನ ಪ್ರವಾದಿಯಾಗಿಯೂ ನಾನು ಸಂತೃಪ್ತನಾಗಿರುವೆನು." [21]

16. ಫಜ್ರ್ ನಮಾಝಿನ ನಂತರ :

« اللَّهُمَّ إِنِّي أَسْأَلُكَ عِلْمًا نَافِعًا، وَرِزْقًا طَيِّبًا، وَعَمَلًا مُتَقَبَّلًا »

**ಅರ್ಥ :** "ಓ ಅಲ್ಲಾಹ್! ಪ್ರಯೋಜನಕಾರಿಯಾದ ಇಲ್ಮ್ ಅನ್ನೂ, ಉತ್ತಮ ಮತ್ತು ಶುದ್ಧವಾದ ಅನ್ನಾಧಾರವನ್ನೂ, (ನಿನ್ನಿಂದ) ಸ್ವೀಕಾರವಾಗುವ ಕರ್ಮವನ್ನೂ ನಾನು ನಿನ್ನೊಂದಿಗೆ ಯಾಚಿಸುತ್ತೇನೆ." [22]

---

21. ನೋಡಿರಿ, ಪುರಾವೆ ಸಂಖ್ಯೆ : 15
22. ನೋಡಿರಿ, ಪುರಾವೆ ಸಂಖ್ಯೆ : 16

## ಸಂಜೆಯ ದಿಕ್ರ್‌ಗಳು

1. ಒಂದು ಬಾರಿ :

« اللَّهُمَّ أَنْتَ رَبِّي لاَ إِلَهَ إِلَّا أَنْتَ، خَلَقْتَنِي وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ لَكَ بِذَنْبِي فَاغْفِرْ لِي، فَإِنَّهُ لاَ يَغْفِرُ الذُّنُوبَ إِلَّا أَنْتَ »

**ಅರ್ಥ :** "ಓ ಅಲ್ಲಾಹ್! ನೀನು ನನ್ನ ರಬ್ಬ್‌ಆಗಿರುವೆ; ನಿನ್ನ ಹೊರತು ಆರಾಧನೆಗೆ ಅರ್ಹನು ಯಾರೂ ಇಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ ಹಾಗೂ ನಾನು ನಿನ್ನ ದಾಸನಾಗಿರುವೆನು. ನನಗೆ ಸಾಧ್ಯವಾದಷ್ಟು ಮಟ್ಟಿಗೆ ನಿನ್ನ ಕರಾರನ್ನು ಪೂರೈಸಲು ನಾನು ಬದ್ಧನಾಗಿರುವೆನು ಹಾಗೂ (ಅಂತ್ಯದಿನದ) ನಿನ್ನ ವಾಗ್ದಾನದ ಬಗ್ಗೆ ನಾನು ದೃಢನಾಗಿರುವೆನು. ನಾನು ಎಸಗಿರುವುದರ ಕೇಡಿನಿಂದ ನಾನು ನಿನ್ನಲ್ಲಿ ಅಭಯವನ್ನು ಯಾಚಿಸುವೆನು, ನೀನು ನನ್ನ ಮೇಲೆ ದಯಪಾಲಿಸಿದ ಸರ್ವ ಅನುಗ್ರಹಗಳನ್ನು ನಾನು ನಿನ್ನ ಮುಂದೆ

ಅಂಗೀಕರಿಸುವೆನು, ನನ್ನ ಸರ್ವ ಪಾಪಗಳನ್ನು ನಿನ್ನ ಬಳಿ ನಾನು ತಪ್ಪೊಪ್ಪಿಕೊಳ್ಳುವೆನು. ಹಾಗಾಗಿ ನನ್ನನ್ನು ಕ್ಷಮಿಸು, ಏಕೆಂದರೆ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರು ಯಾರೂ ಇಲ್ಲ."[23]

2. ಒಂದು ಬಾರಿ :

« أَمْسَيْنَا وَأَمْسَى الْمُلْكُ لِلَّهِ، وَالْحَمْدُ لِلَّهِ لَا إِلَهَ إِلَّا اللهُ، وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ، رَبِّ أَسْأَلُكَ خَيْرَ مَا فِي هَذِهِ اللَّيْلَةِ وَخَيْرَ مَا بَعْدَهَا، وَأَعُوذُ بِكَ مِنْ شَرِّ مَا فِي هَذِهِ اللَّيْلَةِ وَشَرِّ مَا بَعْدَهَا، رَبِّ أَعُوذُ بِكَ مِنَ الْكَسَلِ وَسُوءِ الْكِبَرِ، رَبِّ أَعُوذُ بِكَ مِنْ عَذَابٍ فِي النَّارِ وَعَذَابٍ فِي الْقَبْرِ »

**ಅರ್ಥ :** "ನಾವು ಸಂಜೆಯನ್ನು ಪ್ರವೇಶಿಸಿದೆವು, ಹಾಗೂ ಅಲ್ಲಾಹುವಿಗೆ ಮಾತ್ರವಾಗಿರುವ ಸಕಲ ಆಧಿಪತ್ಯವು ಸಂಜೆಯ ಹೊತ್ತನ್ನು ಪ್ರವೇಶಿಸಿದೆ, ಸರ್ವಸ್ತುತಿಗಳು ಅಲ್ಲಾಹುವಿಗೆ ಮೀಸಲು.

23. ನೋಡಿರಿ, ಪುರಾವೆ ಸಂಖ್ಯೆ : 1

ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನಾಗಿರುವನು ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು. ಓ ನನ್ನ ರಬ್ಬ್! ಈ ರಾತ್ರಿಯಲ್ಲಿ ಅಡಕವಾಗಿರುವ ಒಳಿತನ್ನು ಹಾಗೂ ಇದರ ನಂತರ ಬರುವ (ರಾತ್ರಿಗಳಲ್ಲಿ ಅಡಕವಾಗಿರುವ) ಒಳಿತನ್ನು ನಾನು ನಿನ್ನೊಂದಿಗೆ ಯಾಚಿಸುತ್ತೇನೆ, ಹಾಗೂ ಈ ರಾತ್ರಿಯಲ್ಲಿ ಅಡಕವಾಗಿರುವ ಕೆಡುಕಿನಿಂದ ಹಾಗೂ ಇದರ ನಂತರ ಬರುವ (ರಾತ್ರಿಗಳಲ್ಲಿ ಅಡಕವಾಗಿರುವ) ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷಣೆಯನ್ನು ಬೇಡುತ್ತೇನೆ. ಓ ನನ್ನ ರಬ್ಬ್! ಸೋಮಾರಿತನದಿಂದ ಹಾಗೂ ವೃದ್ಧಾಪ್ಯ ದೌರ್ಬಲ್ಯದಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ. ಓ ನನ್ನ ರಬ್ಬ್! ನರಕಾಗ್ನಿಯ ಶಿಕ್ಷೆಯಿಂದಲೂ ಹಾಗೂ ಕಬ್‌ರಿನ (ಗೋರಿಯ) ಶಿಕ್ಷೆಯಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ.”[24]

24. ನೋಡಿರಿ, ಪುರಾವೆ ಸಂಖ್ಯೆ : 2 (i)

3. ನೂರು ಬಾರಿ :

« سُبْحَانَ اللهِ وَبِحَمْدِهِ »

**ಅರ್ಥ** : "ಅಲ್ಲಾಹುವನ್ನು ಸ್ತುತಿಸುವುದರೊಂದಿಗೆ ಸರ್ವ ನ್ಯೂನತೆಗಳಿಂದಲೂ ಅಲ್ಲಾಹು ಮುಕ್ತನಾಗಿರುವನು ಎಂದು ಅರಿತುಕೊಂಡು, ಅವನ ಪರಿಶುದ್ಧತೆಯನ್ನು ಕೊಂಡಾಡುತ್ತೇನೆ."[25]

4. ಮೂರು ಬಾರಿ : ಸೂರಃ ಅಲ್-ಇಖ್ಲಾಸ್, ಸೂರಃ ಅಲ್-ಫಲಕ್, ಸೂರಃ ಅನ್ನಾಸ್[26]

﴿قُلْ هُوَ ٱللَّهُ أَحَدٌ ۝١ ٱللَّهُ ٱلصَّمَدُ ۝٢ لَمْ يَلِدْ وَلَمْ يُولَدْ ۝٣ وَلَمْ يَكُن لَّهُۥ كُفُوًا أَحَدٌۢ ۝٤﴾

---

25. ನೋಡಿರಿ, ಪುರಾವೆ ಸಂಖ್ಯೆ : 4

26. ನೋಡಿರಿ, ಪುರಾವೆ ಸಂಖ್ಯೆ : 5

www.AbuHammaad.Com

**ಅರ್ಥ :** "(ಅಚಲ ದೃಢವಿಶ್ವಾಸದೊಂದಿಗೆ) ಹೇಳಿರಿ, ಅವನು ಅಲ್ಲಾಹು (ಆತನ ಪರಿಪೂರ್ಣ ನಾಮಗಳಲ್ಲಿ, ಗುಣವಿಶೇಷಣೆಗಳಲ್ಲಿ, ಕ್ರಿಯೆಗಳಲ್ಲಿ ಮತ್ತು ಆರಾಧನೆಯ ಅರ್ಹತೆಯಲ್ಲಿ) ಏಕಮೇವನಾಗಿರುವನು. ಅಲ್ಲಾಹು ತನ್ನ ಎಲ್ಲಾ ಸೃಷ್ಟಿಗಳ ಅಗತ್ಯಗಳಿಂದ ಮುಕ್ತನಾಗಿರುವನು ಹಾಗೂ ಸರ್ವರೂ ಅವನ ಆಶ್ರಿತರಾಗಿರುವರು. ಅವನು ಯಾರಿಗೂ ಜನ್ಮವನ್ನು ನೀಡಿಲ್ಲ ಹಾಗೂ ಅವನು ಯಾರಿಗೂ ಜನಿಸಿದವನೂ ಅಲ್ಲ. (ಆತನ ಪರಿಪೂರ್ಣ ನಾಮಗಳಲ್ಲಿ, ಗುಣವಿಶೇಷಣೆಗಳಲ್ಲಿ, ಮತ್ತು ಕ್ರಿಯೆಗಳಲ್ಲಿ) ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ."[27]

﴿قُلْ أَعُوذُ بِرَبِّ ٱلْفَلَقِ ۝١ مِن شَرِّ مَا خَلَقَ ۝٢ وَمِن شَرِّ غَاسِقٍ إِذَا وَقَبَ ۝٣ وَمِن شَرِّ ٱلنَّفَّٰثَٰتِ فِى ٱلْعُقَدِ ۝٤ وَمِن شَرِّ حَاسِدٍ إِذَا حَسَدَ ۝٥﴾

**ಅರ್ಥ :** "ಹೇಳಿರಿ : ಪ್ರಭಾತದ ರಬ್ಬ್‌ನೊಂದಿಗೆ ನಾನು ರಕ್ಷಣೆ ಬೇಡುತ್ತೇನೆ. ಅವನು ಸೃಷ್ಟಿಸಿದವುಗಳಲ್ಲಿರುವ (ಎಲ್ಲಾ) ಕೇಡಿನಿಂದ.

---

27. ಸೂರಃ ಅಲ್–ಇಖ್ಲಾಸ್ : 1–4

ಹಾಗೂ (ರಾತ್ರಿಯ) ಕತ್ತಲೆಯು ಆವರಿಸಿಕೊಂಡಾಗ ಅದರ (ಇರುಳಿನಲ್ಲಿ ಉದ್ಭವಿಸುವ) ಕೇಡಿನಿಂದ. ಮತ್ತು ಗಂಟುಗಳಲ್ಲಿ (ಮಂತ್ರಿಸಿ) ಊದುವ ಮಾಟಗಾತಿಯರ ಕೇಡಿನಿಂದ. ಹಾಗೂ ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಲ್ಲಾಹುವಿನೊಂದಿಗೆ ರಕ್ಷಣೆ ಬೇಡುತ್ತೇನೆ)." [28]

﴿قُلْ أَعُوذُ بِرَبِّ ٱلنَّاسِ ۝١ مَلِكِ ٱلنَّاسِ ۝٢ إِلَٰهِ ٱلنَّاسِ ۝٣ مِن
شَرِّ ٱلْوَسْوَاسِ ٱلْخَنَّاسِ ۝٤ ٱلَّذِى يُوَسْوِسُ فِى صُدُورِ ٱلنَّاسِ ۝٥
مِنَ ٱلْجِنَّةِ وَٱلنَّاسِ ۝٦﴾

**ಅರ್ಥ** : "ಹೇಳಿರಿ : ಮನುಷ್ಯರ ರಬ್ಬ್‌ನೊಂದಿಗೆ ನಾನು ರಕ್ಷಣೆ ಬೇಡುತ್ತೇನೆ, ಮನುಷ್ಯರ ಅಧಿಪತಿಯೂ, ಮನುಷ್ಯರ (ಏಕೈಕ) ನೈಜ ಆರಾಧ್ಯನೂ (ಆದ ಅಲ್ಲಾಹುವಿನೊಂದಿಗೆ), (ಮನುಷ್ಯರು ಅಲ್ಲಾಹುವನ್ನು ಸ್ಮರಿಸುವ ವೇಳೆ ನಿರಂತರವಾಗಿ) ಹಿಂದೆ ಸರಿಯುವ, (ಮತ್ತು ಅಲ್ಲಾಹುವಿನ ಬಗ್ಗೆ ಅಲಕ್ಷ್ಯರಾಗಿದ್ದಾಗ ಸತತವಾಗಿ) ದುಷ್ಪ್ರೇರಣೆಯನ್ನು ಉಂಟು ಮಾಡುವ ಆತನ

28. ಸೂರಃ ಅಲ್-ಫಲಕ್ : 1–5

www.AbuHammaad.Com

ಕೇಡಿನಿಂದ (ಅರ್ಥಾತ್ ಶೈತಾನ್‌ನ ಕೇಡಿನಿಂದ). ಅವನು ಮನುಷ್ಯರ ಹೃದಯಗಳಲ್ಲಿ (ದುರಾಲೋಚನೆ, ಗೊಂದಲ ಹಾಗೂ ದೇಹೇಚ್ಛೆಗಳನ್ನು ಬಿತ್ತಿ) ದುಷ್ಪ್ರೇರಣೆ ಉಂಟುಮಾಡುತ್ತಾನೆ. (ಹೀಗೆ ಮನುಷ್ಯರ ಹೃದಯಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನು) ಜಿನ್ನ್ ವರ್ಗದಿಂದಲೂ (ಆಗಿರಬಹುದು) ಮತ್ತು ಮನುಷ್ಯ ವರ್ಗದಿಂದಲೂ (ಆಗಿರಬಹುದು)."[29]

5. ಒಂದು ಬಾರಿ :

« اللَّهُمَّ بِكَ أَمْسَيْنَا، وَبِكَ أَصْبَحْنَا، وَبِكَ نَحْيَا، وَبِكَ نَمُوتُ، وَإِلَيْكَ الْمَصِيرُ »

**ಅರ್ಥ :** "ಓ ಅಲ್ಲಾಹ್! ನಿನ್ನ ನೆರವಿನೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು, ಹಾಗೂ ನಿನ್ನ ನೆರವಿನೊಂದಿಗೆ ನಾವು ಮುಂಜಾನೆಯನ್ನು ಪ್ರವೇಶಿಸಿದೆವು. ನಿನ್ನಿಂದಲೇ ನಾವು

29. ಸೂರಃ ಅನ್ನಾಸ್ : 1 – 6

ಜೀವಿಸುತ್ತಿರುವೆವು, ನಿನ್ನಿಂದಲೇ ನಾವು ಮರಣ ಹೊಂದುವೆವು, ಹಾಗೂ ಅಂತಿಮ ಮರಳುವಿಕೆಯು ನಿನ್ನೆಡೆಗಾಗಿದೆ."[30]

6. ಮೂರು ಬಾರಿ :

« بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ، فِي الْأَرْضِ، وَلَا فِي السَّمَاءِ، وَهُوَ السَّمِيعُ الْعَلِيمُ »

**ಅರ್ಥ** : "ಯಾರ ನಾಮವು ಉಚ್ಚರಿಸಲ್ಪಟ್ಟರೆ ಭೂಮಿಯಲ್ಲಿರುವುದಾಗಲೀ ಅಥವಾ ಆಕಾಶದಲ್ಲಿರುವುದಾಗಲೀ ಯಾವುದೂ ಹಾನಿಯುಂಟುಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹುವಿನ ನಾಮದಿಂದ (ನಾನು ರಕ್ಷೆ ಮತ್ತು ಸಹಾಯವನ್ನು ಯಾಚಿಸುತ್ತೇನೆ). ಅವನು ಎಲ್ಲವನ್ನು ಆಲಿಸುವವನೂ, ಎಲ್ಲದರ ಕುರಿತು ಅರಿವುಳ್ಳವನೂ ಆಗಿದ್ದಾನೆ." [31]

30. ನೋಡಿರಿ, ಪುರಾವೆ ಸಂಖ್ಯೆ : 6 (ii)
31. ನೋಡಿರಿ, ಪುರಾವೆ ಸಂಖ್ಯೆ : 7

www.AbuHammaad.Com

7. ಒಂದು ಬಾರಿ :

« اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ، اللَّهُمَّ إِنِّي أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ وَأَهْلِي وَمَالِي، اللَّهُمَّ اسْتُرْ عَوْرَاتِي وَآمِنْ رَوْعَاتِي، اللَّهُمَّ احْفَظْنِي مِنْ بَيْنِ يَدَيَّ، وَمِنْ خَلْفِي، وَعَنْ يَمِينِي، وَعَنْ شِمَالِي، وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي »

**ಅರ್ಥ :** "ಓ ಅಲ್ಲಾಹ್! ಇಹಲೋಕದಲ್ಲೂ ಪರಲೋಕದಲ್ಲೂ (ಸಕಲ ಕೇಡುಗಳಿಂದ) ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ನಾನು ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ದೀನ್‌ನಲ್ಲೂ, ನನ್ನ ಐಹಿಕ ಜೀವನದಲ್ಲೂ, ನನ್ನ ಕುಟುಂಬ ಮತ್ತು ಸಂಪತ್ತಿನಲ್ಲೂ ಕ್ಷಮೆ, ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ನ್ಯೂನತೆ ಮತ್ತು ತಪ್ಪುಗಳನ್ನು ಮರೆಮಾಡು ಮತ್ತು (ಸುರಕ್ಷತೆಯನ್ನು ನೀಡುವ ಮೂಲಕ) ನನ್ನ ಭಯವನ್ನು ನೀಗಿಸು. ಓ ಅಲ್ಲಾಹ್! ನನ್ನ ಮುಂದಿನಿಂದಲೂ ಹಾಗೂ ಹಿಂದಿನಿಂದಲೂ,

ನನ್ನ ಬಲದಿಂದಲೂ ಹಾಗೂ ಎಡದಿಂದಲೂ, ನನ್ನ ಮೇಲಿನಿಂದಲೂ ನನ್ನನ್ನು ಸಂರಕ್ಷಿಸು. ನನ್ನ ಕೆಳಭಾಗದಿಂದ ಹಠಾತ್ತನೇ (ಹಿಡಿಯಲ್ಪಟ್ಟು ಅಲಕ್ಷ್ಯನಾಗಿ) ನಾಶಹೊಂದುವುದರಿಂದ ನಿನ್ನ ಮಹಿಮೆಯೊಂದಿಗೆ ನಾನು ಅಭಯ ಯಾಚಿಸುತ್ತೇನೆ."[32]

8. ಒಂದು ಬಾರಿ ಅಥವಾ ಹತ್ತು ಬಾರಿ ಅಥವಾ ನೂರು ಬಾರಿ :

«لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ»

**ಅರ್ಥ** : "ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನೂ ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು."[33]

---

32. ನೋಡಿರಿ, ಪುರಾವೆ ಸಂಖ್ಯೆ : 8
33. ನೋಡಿರಿ, ಪುರಾವೆ ಸಂಖ್ಯೆ : 9 (i), (ii), (iii)

www.AbuHammaad.Com

9. ಒಂದು ಬಾರಿ :

« اللَّهُمَّ فَاطِرَ السَّمَوَاتِ وَالأَرْضِ عَالِمَ الغَيْبِ وَالشَّهَادَةِ لَا إِلَهَ إِلَّا أَنْتَ رَبَّ كُلِّ شَيْءٍ وَمَلِيكَهُ، أَعُوذُ بِكَ مِنْ شَرِّ نَفْسِي، وَمِنْ شَرِّ الشَّيْطَانِ وَشِرْكِهِ، وَأَنْ أَقْتَرِفَ عَلَى نَفْسِي سُوءًا أَوْ أَجُرَّهُ إِلَى مُسْلِمٍ »

**ಅರ್ಥ :** "ಓ ಅಲ್ಲಾಹ್! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಅಗೋಚರ ಹಾಗೂ ಗೋಚರವಾಗಿರುವುದರ ಕುರಿತು ಅರಿವುಳ್ಳವನೇ, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ. ಸಕಲ ವಸ್ತುಗಳ ಸೃಷ್ಟಿಕರ್ತನೂ, ಒಡೆಯನೂ, ಪರಿಪಾಲಕನೂ ಹಾಗೂ ಅವೆಲ್ಲದರ ಪರಮ ಅಧಿಪತಿಯೇ! ನನ್ನ ಮನಸ್ಸಿನ ಕೆಡುಕಿನಿಂಲೂ ಮತ್ತು ಶೈತಾನ್‌ನ ಕೆಡುಕಿನಿಂದಲೂ ಹಾಗೂ ಅವನು ಆಹ್ವಾನ ನೀಡುವ ಶಿರ್ಕ್‌ನಿಂದಲೂ (ಅಲ್ಲಾಹುವಿನೊಂದಿಗೆ ಇತರರನ್ನು ಸಹಭಾಗಿಗಳಾಗಿ ಮಾಡಲು ಶೈತಾನ್ ನೀಡುವ ಕರೆಯಿಂದಲೂ); ನನ್ನ ಸ್ವಂತದ ವಿರುದ್ಧವೆಸಗುವ ಕೆಡುಕಿನಿಂದಲೂ ಅಥವಾ ಅದನ್ನು

ಓರ್ವ ಮುಸ್ಲಿಮ್‌ನ ಮೇಲೆ ಎಸಗುವುದರಿಂದಲೂ ನಾನು ನಿನ್ನಲ್ಲಿ ಅಭಯ ಯಾಚಿಸುತ್ತೇನೆ." [34]

10. ಒಂದು ಬಾರಿ :

« يَا حَيُّ يَا قَيُّومُ بِرَحْمَتِكَ أَسْتَغِيثُ، أَصْلِحْ لِي شَأْنِي كُلَّهُ، وَلَا تَكِلْنِي إِلَى نَفْسِي طَرْفَةَ عَيْنٍ »

**ಅರ್ಥ** : "ಓ ಸದಾ ಜೀವಂತನಾಗಿರುವವನೇ! ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೇ (ಓ ಅಲ್ಲಾಹ್)! ನಿನ್ನ ಕಾರುಣ್ಯದೊಂದಿಗೆ ನಾನು ಸಹಾಯ ಯಾಚಿಸುತ್ತಿದ್ದೇನೆ. ನನ್ನ ಸರ್ವ ಕಾರ್ಯಗಳನ್ನು ನನಗೆ ನೀನು ಸರಿಪಡಿಸು, ಕಣ್ಣಿನ ಮಿಟುಕಿನಷ್ಟು ಕ್ಷಣವೂ ಸ್ವತಃ ನನ್ನನ್ನೇ ನಾನು ಅವಲಂಬಿಸುವಂತೆ ನೀನು ಮಾಡದಿರು." [35]

---

34. ನೋಡಿರಿ, ಪುರಾವೆ ಸಂಖ್ಯೆ : 10

35. ನೋಡಿರಿ, ಪುರಾವೆ ಸಂಖ್ಯೆ : 11

11. ಮೂರು ಬಾರಿ :

« أَمْسَيْتُ أُثْنِيَ عَلَيْكَ حَمْدًا، وَأَشْهَدُ أَنْ لَا إِلَهَ إِلَّا اللهُ »

**ಅರ್ಥ :** “ನಿನ್ನನ್ನು ಪ್ರಶಂಸಿಸುತ್ತಾ ನಾನು ಸಂಜೆಯನ್ನು ಪ್ರವೇಶಿಸಿದೆನು, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುವೆನು.”[36]

12. ಒಂದು ಬಾರಿ :

﴿ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا تَأۡخُذُهُۥ سِنَةٞ وَلَا نَوۡمٞۚ لَّهُۥ مَا فِي ٱلسَّمَٰوَٰتِ وَمَا فِي ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا بِإِذۡنِهِۦۚ يَعۡلَمُ مَا بَيۡنَ أَيۡدِيهِمۡ وَمَا خَلۡفَهُمۡۖ وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا شَآءَۚ وَسِعَ كُرۡسِيُّهُ ٱلسَّمَٰوَٰتِ وَٱلۡأَرۡضَۖ وَلَا يَـُٔودُهُۥ حِفۡظُهُمَاۚ وَهُوَ ٱلۡعَلِيُّ ٱلۡعَظِيمُ ٢٥٥﴾

36. ನೋಡಿರಿ, ಪುರಾವೆ ಸಂಖ್ಯೆ : 12

**ಅರ್ಥ :** "ಅಲ್ಲಾಹು, ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ; ಅವನು ಸದಾ ಜೀವಿಸುವವನೂ ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೂ ಆಗಿರುವನು. ತೂಕಡಿಕೆಯಾಗಲೀ ನಿದ್ರೆಯಾಗಲೀ ಅವನನ್ನು ಬಾಧಿಸದು. ಆಕಾಶಗಳಲ್ಲಿರುವುದೂ ಭೂಮಿಯಲ್ಲಿರುವುದೂ (ಸಕಲವೂ) ಅವನಿಗೆ ಸೇರಿದ್ದಾಗಿದೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸು ಮಾಡುವವನು ಯಾರು? ಅವರ ಮುಂದಿರುವ ಹಾಗೂ ಅವರ ಹಿಂದಿರುವ (ಹಿಂದೆ ನಡೆದು ಹೋಗಿರುವ ಹಾಗೂ ಮುಂದೆ ಸಂಭವಿಸಲಿರುವ) ಸಕಲವನ್ನೂ ಅವನು ಅರಿಯುತ್ತಾನೆ, ಅವನು ಏನನ್ನು (ಕಲಿಸಿಕೊಡಲು) ಇಚ್ಛಿಸುತ್ತಾನೋ ಅದರ ಹೊರತು ಅವನ ಅರಿವಿನಿಂದ ಯಾವುದನ್ನೂ ಅವರು ಅರಿಯಲಾರರು. ಅವನ ಕುರ್ಸೀ (ಅಲ್ಲಾಹುವಿನ ಎರಡು ಪಾದಗಳ ಸ್ಥಳ) ಆಕಾಶಗಳ ಮತ್ತು ಭೂಮಿಯ ಮೇಲೆ ವ್ಯಾಪಿಸಿಕೊಂಡಿದೆ, ಅವೆರಡನ್ನು (ಆಕಾಶಗಳು ಮತ್ತು ಭೂಮಿಯನ್ನು) ಸಂರಕ್ಷಿಸುವುದು ಅವನಿಗೆ ಹೊರೆಯಾಗದು. ಅವನು ಪರಮೋನ್ನತನೂ ಅತ್ಯುನ್ನತ ಮಹಿಮೆಯನ್ನು ಹೊಂದಿರುವವನೂ ಆಗಿರುವನು."[37]

---

37. ಸೂರಃ ಅಲ್–ಬಕರಃ : 255; ನೋಡಿರಿ, ಪುರಾವೆ ಸಂಖ್ಯೆ : 13

www.AbuHammaad.Com

13. ಮೂರು ಬಾರಿ :

« أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ »

**ಅರ್ಥ :** "ಅಲ್ಲಾಹುವಿನ ಪರಿಪೂರ್ಣ ವಚನಗಳೊಂದಿಗೆ ಅವನು ಸೃಷ್ಟಿಸಿದವುಗಳ ಕೇಡಿನಿಂದ ನಾನು ಅಭಯಯಾಚಿಸುತ್ತೇನೆ."[38]

---

38. ನೋಡಿರಿ, ಪುರಾವೆ ಸಂಖ್ಯೆ : 17

## ಸದಾ ಹೇಳಬೇಕಾದ ದುಆಗಳು [39]

« اللَّهُمَّ أَجِرْنِي مِنَ النَّارِ »

**ಅರ್ಥ :** “ಓ ಅಲ್ಲಾಹ್! ನರಕಾಗ್ನಿಯಿಂದ ನನ್ನನ್ನು ರಕ್ಷಿಸು!”

« اللَّهُمَّ إِنِّي أَسْأَلُكَ الْجَنَّةَ »

**ಅರ್ಥ :** “ಓ ಅಲ್ಲಾಹ್! ನಾನು ನಿನ್ನೊಂದಿಗೆ ಸ್ವರ್ಗವನ್ನು ಯಾಚಿಸುತ್ತೇನೆ”

---

39. ನೋಡಿರಿ, ಪುರಾವೆ ಸಂಖ್ಯೆ : 18

## ಮುಂಜಾನೆ ಮತ್ತು ಸಂಜೆಯ ದಿಕ್ರ್‌ಗಳಿಗಿರುವ ಪುರಾವೆಗಳು

1. ಶದ್ದಾದ್ ಬಿನ್ ಔಸ್ (رَضِيَ ٱللَّهُ عَنْهُ) ರವರಿಂದ ವರದಿ, ಪ್ರವಾದಿ (صَلَّىٰ ٱللَّهُ عَلَيْهِ وَسَلَّمَ) ರವರು ಹೇಳಿದರು : "ಕ್ಷಮೆ ಯಾಚಿಸುವ ಅತ್ಯಂತ ಶ್ರೇಷ್ಠ ವಿಧಾನವು :

« اللَّهُمَّ أَنْتَ رَبِّي لاَ إِلَهَ إِلَّا أَنْتَ، خَلَقْتَنِي وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ لَكَ بِذَنْبِي فَاغْفِرْ لِي، فَإِنَّهُ لاَ يَغْفِرُ الذُّنُوبَ إِلَّا أَنْتَ »

"ಓ ಅಲ್ಲಾಹ್! ನೀನು ನನ್ನ ರಬ್ಬ್ ಆಗಿರುವೆ; ನಿನ್ನ ಹೊರತು ಆರಾಧನೆಗೆ ಅರ್ಹನು ಯಾರೂ ಇಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ ಹಾಗೂ ನಾನು ನಿನ್ನ ದಾಸನಾಗಿರುವೆನು. ನನಗೆ ಸಾಧ್ಯವಾದಷ್ಟು ಮಟ್ಟಿಗೆ ನಿನ್ನ ಕರಾರನ್ನು ಪೂರೈಸಲು ನಾನು ಬದ್ಧನಾಗಿರುವೆನು ಹಾಗೂ (ಅಂತ್ಯದಿನದ) ನಿನ್ನ ವಾಗ್ದಾನದ ಬಗ್ಗೆ

ನಾನು ದೃಢನಾಗಿರುವೆನು. ನಾನು ಎಸಗಿರುವುದರ ಕೇಡಿನಿಂದ ನಾನು ನಿನ್ನಲ್ಲಿ ಅಭಯವನ್ನು ಯಾಚಿಸುವೆನು, ನೀನು ನನ್ನ ಮೇಲೆ ದಯಪಾಲಿಸಿದ ಸರ್ವ ಅನುಗ್ರಹಗಳನ್ನು ನಾನು ನಿನ್ನ ಮುಂದೆ ಅಂಗೀಕರಿಸುವೆನು, ನನ್ನ ಸರ್ವ ಪಾಪಗಳನ್ನು ನಿನ್ನ ಬಳಿ ನಾನು ತಪ್ಪೊಪ್ಪಿಕೊಳ್ಳುವೆನು. ಹಾಗಾಗಿ ನನ್ನನ್ನು ಕ್ಷಮಿಸು, ಏಕೆಂದರೆ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರು ಯಾರೂ ಇಲ್ಲ." – ಎಂದು ಹೇಳುವುದಾಗಿದೆ.

ಯಾರಿದನ್ನು ಹಗಲಿನ ವೇಳೆಯಲ್ಲಿ –ಆ ಕುರಿತು ಖಚಿತವಾಗಿದ್ದುಕೊಂಡು (ಅದರ ಅರ್ಥ ಉದ್ದೇಶದೊಂದಿಗೆ ವಿಶ್ವಾಸವನ್ನಿಟ್ಟು)– ಹೇಳಿ, ಸಂಜೆಗಿಂತ ಮುನ್ನ ಮರಣ ಹೊಂದಿದರೆ, ಅವನು ಸ್ವರ್ಗದ ಜನರ ಪೈಕಿಯಾಗಿರುವನು ಹಾಗೂ ಯಾರಿದನ್ನು ರಾತ್ರಿಯ ವೇಳೆಯಲ್ಲಿ –ಆ ಕುರಿತು ಖಚಿತವಾಗಿದ್ದುಕೊಂಡು– ಹೇಳಿ ಮುಂಜಾನೆಗಿಂತಲೂ ಮುಂಚಿತವಾಗಿ ಮರಣ ಹೊಂದಿದರೆ, ಅವನು ಸ್ವರ್ಗದ ಜನರ ಪೈಕಿಯಾಗಿರುವನು. [40]

---

40. ಬುಖಾರಿ : 6306, 6323

www.AbuHammaad.Com

2. (i) ಅಬ್ದುಲ್ಲಾಹ್ ಬಿನ್ ಮಸ್‌ಊದ್ (رَضِيَ ٱللَّهُ عَنْهُ) ಹೇಳಿದರು : ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಸಂಜೆಯ ಹೊತ್ತನ್ನು ಪ್ರವೇಶಿಸಿದರೆ ಅವರು (ಹೀಗೆ) ಹೇಳುತ್ತಿದ್ದರು :

« أَمْسَيْنَا وَأَمْسَى الْمُلْكُ لِلَّهِ، وَالْحَمْدُ لِلَّهِ لَا إِلَهَ إِلَّا اللهُ، وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ، رَبِّ أَسْأَلُكَ خَيْرَ مَا فِي هَذِهِ اللَّيْلَةِ وَخَيْرَ مَا بَعْدَهَا، وَأَعُوذُ بِكَ مِنْ شَرِّ مَا فِي هَذِهِ اللَّيْلَةِ وَشَرِّ مَا بَعْدَهَا، رَبِّ أَعُوذُ بِكَ مِنَ الْكَسَلِ وَسُوءِ الْكِبَرِ، رَبِّ أَعُوذُ بِكَ مِنْ عَذَابٍ فِي النَّارِ وَعَذَابٍ فِي الْقَبْرِ »

“ನಾವು ಸಂಜೆಯನ್ನು ಪ್ರವೇಶಿಸಿದೆವು, ಹಾಗೂ ಅಲ್ಲಾಹುವಿಗೆ ಮಾತ್ರವಾಗಿರುವ ಸಕಲ ಆಧಿಪತ್ಯವು ಸಂಜೆಯ ಹೊತ್ತನ್ನು ಪ್ರವೇಶಿಸಿದೆ, ಸರ್ವಸ್ತುತಿಗಳು ಅಲ್ಲಾಹುವಿಗೆ ಮೀಸಲು. ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನಾಗಿರುವನು ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು. ಓ ನನ್ನ ರಬ್ಬ್! ಈ ರಾತ್ರಿಯಲ್ಲಿ

ಅಡಕವಾಗಿರುವ ಒಳಿತನ್ನು ಹಾಗೂ ಇದರ ನಂತರ ಬರುವ (ರಾತ್ರಿಗಳಲ್ಲಿ ಅಡಕವಾಗಿರುವ) ಒಳಿತನ್ನು ನಾನು ನಿನ್ನೊಂದಿಗೆ ಯಾಚಿಸುತ್ತೇನೆ, ಹಾಗೂ ಈ ರಾತ್ರಿಯಲ್ಲಿ ಅಡಕವಾಗಿರುವ ಕೆಡುಕಿನಿಂದ ಹಾಗೂ ಇದರ ನಂತರ ಬರುವ (ರಾತ್ರಿಗಳಲ್ಲಿ ಅಡಕವಾಗಿರುವ) ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷಣೆಯನ್ನು ಬೇಡುತ್ತೇನೆ. ಓ ನನ್ನ ರಬ್ಬ್! ಸೋಮಾರಿತನದಿಂದ ಹಾಗೂ ವೃದ್ಧಾಪ್ಯ ದೌರ್ಬಲ್ಯದಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ. ಓ ನನ್ನ ರಬ್ಬ್! ನರಕಾಗ್ನಿಯ ಶಿಕ್ಷೆಯಿಂದಲೂ ಹಾಗೂ ಕಬ್‌ರಿನ (ಗೋರಿಯ) ಶಿಕ್ಷೆಯಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ."

(ii) ಅವರು (ﷺ) ಮುಂಜಾನೆಯ ಹೊತ್ತನ್ನು ಪ್ರವೇಶಿಸಿದರೆ (ಹೀಗೆ) ಹೇಳುತ್ತಿದ್ದರು :

« أَصْبَحْنَا وَأَصْبَحَ الْمُلْكُ لِلَّهِ وَالْحَمْدُ لِلَّهِ لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ، رَبِّ أَسْأَلُكَ خَيْرَ مَا فِي هَذَا الْيَوْمِ وَخَيْرَ مَا بَعْدَهُ وَأَعُوذُ بِكَ مِنْ شَرِّ مَا

فِي هَذَا الْيَوْمِ وَشَرِّ مَا بَعْدَهُ، رَبِّ أَعُوذُ بِكَ مِنَ الْكَسَلِ وَسُوءِ الْكِبَرِ، رَبِّ أَعُوذُ بِكَ مِنْ عَذَابٍ فِي النَّارِ وَعَذَابٍ فِي الْقَبْرِ »

“ನಾವು ಮುಂಜಾನೆಯನ್ನು ಪ್ರವೇಶಿಸಿದೆವು, ಹಾಗೂ ಅಲ್ಲಾಹುವಿಗೆ ಮಾತ್ರವಾಗಿರುವ ಸಕಲ ಆಧಿಪತ್ಯವು ಮುಂಜಾನೆಯ ಹೊತ್ತನ್ನು ಪ್ರವೇಶಿಸಿದೆ, ಸರ್ವಸ್ತುತಿಗಳು ಅಲ್ಲಾಹುವಿಗೆ ಮೀಸಲು. ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನಾಗಿರುವನು ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು. ಓ ನನ್ನ ರಬ್ಬ್! ಈ ದಿನದಲ್ಲಿ ಅಡಕವಾಗಿರುವ ಒಳಿತನ್ನು ಹಾಗೂ ಇದರ ನಂತರ ಬರುವ (ದಿನಗಳಲ್ಲಿ ಅಡಕವಾಗಿರುವ) ಒಳಿತನ್ನು ನಾನು ನಿನ್ನೊಂದಿಗೆ ಯಾಚಿಸುತ್ತೇನೆ, ಹಾಗೂ ಈ ದಿನದಲ್ಲಿ ಅಡಕವಾಗಿರುವ ಕೆಡುಕಿನಿಂದ ಹಾಗೂ ಇದರ ನಂತರ ಬರುವ (ದಿನಗಳಲ್ಲಿ ಅಡಕವಾಗಿರುವ) ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷಣೆಯನ್ನು ಬೇಡುತ್ತೇನೆ. ಓ ನನ್ನ ರಬ್ಬ್! ಸೋಮಾರಿತನದಿಂದ ಹಾಗೂ ವೃದ್ಧಾಪ್ಯ ದೌರ್ಬಲ್ಯದಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ.

ಓ ನನ್ನ ರಬ್ಬ್! ನರಕಾಗ್ನಿಯ ಶಿಕ್ಷೆಯಿಂದಲೂ ಹಾಗೂ ಕಬ್‌ರಿನ (ಗೋರಿಯ) ಶಿಕ್ಷೆಯಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ." [41]

3. ಜುವೈರಿಯಃ (رَضِيَ ٱللَّهُ عَنْهَا) ರಿಂದ ವರದಿ : ಅವರು (ಜುವೈರಿಯಃ رَضِيَ ٱللَّهُ عَنْهَا ರವರು) ತಮ್ಮ ನಮಾಝ್ ನಿರ್ವಹಿಸುವ ಸ್ಥಳದಲ್ಲಿರುವಾಗ ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಸುಬ್‌ಹಿ ನಮಾಝ್ ನಿರ್ವಹಿಸಿ ಮುಂಜಾವಿನ ವೇಳೆ ಅವರ (ಜುವೈರಿಯಃ رَضِيَ ٱللَّهُ عَنْهَا) ಬಳಿಯಿಂದ ಹಾದು ಹೊರಹೋದರು, ಬಳಿಕ ಪೂರ್ವಾಹ್ನದ ವೇಳೆ ಮತ್ತೆ ಅವರು ಹಿಂದಿರುಗಿದರು ಆಗ ಅವರು (ಜುವೈರಿಯಃ رَضِيَ ٱللَّهُ عَنْهَا ರವರು) (ಇನ್ನೂ ಅದೇ ಸ್ಥಳದಲ್ಲಿ) ಕುಳಿತುಕೊಂಡಿದ್ದರು. ಅವರು (صَلَّى ٱللَّهُ عَلَيْهِ وَسَلَّمَ) ಹೇಳಿದರು : "ನಿನ್ನನ್ನು ಬಿಟ್ಟು ನಾನು ಹೊರಹೋದಾಗ ನೀನು (ಕುಳಿತುಕೊಂಡು) ಇದ್ದ ಸ್ಥಿತಿಯಲ್ಲೇ ಇನ್ನೂ ಇದ್ದಿಯೇ?" ಆಗ ಅವರು (ಜುವೈರಿಯಃ رَضِيَ ٱللَّهُ عَنْهَا ರವರು) ಹೇಳಿದರು : ಹೌದು. ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು : ಖಂಡಿತವಾಗಿಯೂ

41. ಮುಸ್ಲಿಮ್ : 2723

www.AbuHammaad.Com

ನಿನ್ನನ್ನು ಬಿಟ್ಟು ಹೊರಹೋದಾಗ ನಾನು ನಾಲ್ಕು ವಚನಗಳನ್ನು ಮೂರು ಬಾರಿ ಹೇಳಿದೆನು : ಯಾವುದನ್ನೆಲ್ಲಾ ನೀನಿಂದು ಹೇಳಿರುವೆಯೋ ಅದನ್ನು ಇವುಗಳ ಮುಂದೆ ತೂಕಹಾಕಿದರೆ ಇವುಗಳು ಅವೆಲ್ಲಕ್ಕಿಂತ ಹೆಚ್ಚು ತೂಕ ಹೊಂದಿರುವುದು. (ಆ ನಾಲ್ಕು ವಚನಗಳೇನೆಂದರೆ) :

« سُبْحَانَ اللهِ وَبِحَمْدِهِ، عَدَدَ خَلْقِهِ وَرِضَا نَفْسِهِ وَزِنَةَ عَرْشِهِ وَمِدَادَ كَلِمَاتِهِ »

ಅಲ್ಲಾಹುವನ್ನು ಸ್ತುತಿಸುವುದರೊಂದಿಗೆ ಸರ್ವ ನ್ಯೂನತೆಗಳಿಂದಲೂ ಅಲ್ಲಾಹು ಮುಕ್ತನಾಗಿರುವನು ಎಂದು ಅರಿತುಕೊಂಡು, ಅವನ ಪರಿಶುದ್ಧತೆಯನ್ನು ಕೊಂಡಾಡುತ್ತೇನೆ. (ಅದು) ಅವನ ಸೃಷ್ಟಿಗಳ ಸಂಖ್ಯೆಯಷ್ಟು, ಅವನು ಸ್ವತಃ ತೃಪ್ತಿ ಹೊಂದಿದಷ್ಟು, ಅವನ ಅರ್ಶ್‌ನ (ಸಿಂಹಾಸನದ) ಭಾರದಷ್ಟು, ಅವನ ವಚನವು ಅಧಿಕವಾಗಿರುವಷ್ಟು. [42]

42. ಮುಸ್ಲಿಮ್ : 2726

4. ಅಬೂ ಹುರೈರಃ (رَضِيَٱللَّهُعَنْهُ) ರಿಂದ ವರದಿ : ಅಲ್ಲಾಹುವಿನ ರಸೂಲ್ (صَلَّىٱللَّهُعَلَيْهِوَسَلَّمَ) ರವರು ಹೇಳಿದರು :

« سُبْحَانَ اللهِ وَبِحَمْدِهِ »

“ಅಲ್ಲಾಹುವನ್ನು ಸ್ತುತಿಸುವುದರೊಂದಿಗೆ ಸರ್ವ ನ್ಯೂನತೆಗಳಿಂದಲೂ ಅಲ್ಲಾಹು ಮುಕ್ತನಾಗಿರುವನು ಎಂದು ಅರಿತುಕೊಂಡು, ಅವನ ಪರಿಶುದ್ಧತೆಯನ್ನು ಕೊಂಡಾಡುತ್ತೇನೆ." ಎಂದು ಯಾರು ಬೆಳಿಗ್ಗೆ ಮತ್ತು ಸಂಜೆ ನೂರು ಬಾರಿ ಹೇಳುತ್ತಾನೋ, ಅಂತ್ಯ ದಿನದಂದು ಇದಕ್ಕಿಂತಲೂ ಉತ್ತಮವಾದುದನ್ನು ಅವನು ತರಲಾರನು, ಆದರೆ ಇದೇ ರೀತಿ ಅವನು ಹೇಳಿದ ವಚನಗಳನ್ನೇ ಹೇಳಿದವನು ಅಥವಾ ಇದಕ್ಕಿಂತ ಅಧಿಕವಾಗಿ ಹೇಳಿದವನನ್ನು ಹೊರತುಪಡಿಸಿ.” [43]

5. ಅಬ್ದುಲ್ಲಾಹ್ ಬಿನ್ ಖುಬೈಬ್ (رَضِيَٱللَّهُعَنْهُ) ರವರು ಹೇಳಿದರು : ನಮ್ಮನ್ನು ನಮಾಝ್‌ನಲ್ಲಿ ಮುನ್ನಡೆಸಲೆಂದು ಅಲ್ಲಾಹುವಿನ ರಸೂಲ್ (صَلَّىٱللَّهُعَلَيْهِوَسَلَّمَ) ರವರನ್ನು ಹುಡುಕುತ್ತಾ ನಾವು ಒಂದು

43. ಮುಸ್ಲಿಮ್ : 2692

www.AbuHammaad.Com

ಮಳೆಯ ಹಾಗೂ ತೀವ್ರ ಕತ್ತಲೆ ಕವಿದ ರಾತ್ರಿಯಲ್ಲಿ ಹೊರಟೆವು. ಹೀಗೆ ನಾವು ಅವರನ್ನು ಕಂಡುಕೊಂಡೆವು ಆಗ ಅವರು (ﷺ) ಹೇಳಿದರು : "ನೀವು ಪ್ರಾರ್ಥಿಸಿದ್ದೀರಾ?" ಆಗ ನಾನು ಏನೂ ಹೇಳಲಿಲ್ಲ, ಅವರು (ﷺ) ಹೇಳಿದರು : "ಹೇಳು!" ಆಗ ನಾನು ಏನನ್ನೂ ಹೇಳಲಿಲ್ಲ, ಅವರು (ﷺ) ಹೇಳಿದರು : "ಹೇಳು!" ಆಗಲೂ ನಾನು ಏನೂ ಹೇಳಲಿಲ್ಲ, ಅವರು (ﷺ) ಇನ್ನೊಮ್ಮೆ ಹೇಳಿದರು : "ಹೇಳು!" ಆಗ ನಾನು ಹೇಳಿದೆ : ಓ ಅಲ್ಲಾಹುವಿನ ರಸೂಲರೇ, ನಾನು ಏನು ಹೇಳಬೇಕು? ಅವರು (ﷺ) ಹೇಳಿದರು : "ಕುಲ್ ಹುವಲ್ಲಾಹು ಅಹದ್ (ಸೂರಃ ಅಲ್-ಇಖ್ಲಾಸ್) ಮತ್ತು ರಕ್ಷಣೆಯನ್ನು ಯಾಚಿಸುವ ಎರಡು ಸೂರತ್‌ಗಳನ್ನು (ಸೂರಃ ಅಲ್-ಫಲಕ್, ಸೂರಃ ಅನ್ನಾಸ್) ಮುಂಜಾನೆ ಮತ್ತು ಸಂಜೆಯ ವೇಳೆ ಮೂರು ಬಾರಿ ಪಠಿಸಿರಿ. ಅವು ಎಲ್ಲದಕ್ಕೂ ನಿಮಗೆ ಸಾಕಾಗುವುದು." [44]

44. ಅಬೂ ದಾವೂದ್ : 5082, ಶೈಖ್ ಅಲ್-ಅಲ್ಬಾನೀ (رَحِمَهُ ٱللَّٰهُ) ಇದನ್ನು 'ಹಸನ್' ಎಂದು ಉಲ್ಲೇಖಿಸಿರುವರು.

6. (i) ಅಬೂ ಹುರೈರ (رَضِيَ ٱللَّهُ عَنْهُ) ರವರು ಹೇಳಿದರು : ಪ್ರವಾದಿ (صَلَّى ٱللَّهُ عَلَيْهِ وَسَلَّمَ) ಮುಂಜಾನೆಯನ್ನು ಪ್ರವೇಶಿಸಿದರೆ ಅವರು (ಹೀಗೆ) ಹೇಳುತ್ತಿದ್ದರು :

« اللَّهُمَّ بِكَ أَصْبَحْنَا وَبِكَ أَمْسَيْنَا وَبِكَ نَحْيَا وَبِكَ نَمُوتُ وَإِلَيْكَ النُّشُورُ »

"ಓ ಅಲ್ಲಾಹ್! ನಿನ್ನ ನೆರವಿನೊಂದಿಗೆ ನಾವು ಮುಂಜಾನೆಯನ್ನು ಪ್ರವೇಶಿಸಿದೆವು, ಹಾಗೂ ನಿನ್ನ ನೆರವಿನೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ನಿನ್ನಿಂದಲೇ ನಾವು ಜೀವಿಸುತ್ತಿರುವೆವು, ನಿನ್ನಿಂದಲೇ ನಾವು ಮರಣವೆವು, ಹೊಂದುತ್ತೇವೆ ಹಾಗೂ ಪುನರುತ್ಥಾನವು ನಿನ್ನೆಡೆಗಾಗಿದೆ."

(ii) ಅವರು (صَلَّى ٱللَّهُ عَلَيْهِ وَسَلَّمَ) ಸಂಜೆಯನ್ನು ಪ್ರವೇಶಿಸಿದರೆ (ಹೀಗೆ) ಹೇಳುತ್ತಿದ್ದರು :

« اللَّهُمَّ بِكَ أَمْسَيْنَا، وَبِكَ أَصْبَحْنَا، وَبِكَ نَحْيَا، وَبِكَ نَمُوتُ، وَإِلَيْكَ الْمَصِيرُ »

"ಓ ಅಲ್ಲಾಹ್! ನಿನ್ನ ನೆರವಿನೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು, ಹಾಗೂ ನಿನ್ನ ನೆರವಿನೊಂದಿಗೆ ನಾವು ಮುಂಜಾನೆಯನ್ನು ಪ್ರವೇಶಿಸಿದೆವು. ನಿನ್ನಿಂದಲೇ ನಾವು ಜೀವಿಸುತ್ತಿರುವೆವು, ನಿನ್ನಿಂದಲೇ ನಾವು ಮರಣ ಹೊಂದುವೆವು, ಹಾಗೂ ಅಂತಿಮ ಮರಳುವಿಕೆಯು ನಿನ್ನೆಡೆಗಾಗಿದೆ." [45]

7. ಉಸ್ಮಾನ್ ಬಿನ್ ಅಫ್ಫಾನ್ (رَضِيَ ٱللَّهُ عَنْهُ) ರವರು ಹೇಳಿದರು : ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಹೇಳುವುದನ್ನು ನಾನು ಆಲಿಸಿರುವೆನು :

« بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ، فِي الْأَرْضِ، وَلَا فِي السَّمَاءِ، وَهُوَ السَّمِيعُ الْعَلِيمُ »

"ಯಾರ ನಾಮವು ಉಚ್ಚರಿಸಲ್ಪಟ್ಟರೆ ಭೂಮಿಯಲ್ಲಿರುವುದಾಗಲೀ ಅಥವಾ ಆಕಾಶದಲ್ಲಿರುವುದಾಗಲೀ ಯಾವುದೂ

---

45. ಅಲ್-ಬುಖಾರೀ ತಮ್ಮ ಅಲ್-ಅದಬ್ ಅಲ್-ಮುಫ್ರದ್‌ನಲ್ಲಿ: 1199, ಶೈಖ್ ಅಲ್-ಅಲ್ಬಾನೀ (رَحِمَهُ ٱللَّهُ) ಸಹೀಹ್ ಎಂದು ಧೃಡೀಕರಿಸಿರುವರು.

ಹಾನಿಯುಂಟುಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹುವಿನ ನಾಮದಿಂದ (ನಾನು ರಕ್ಷೆ ಮತ್ತು ಸಹಾಯವನ್ನು ಯಾಚಿಸುತ್ತೇನೆ). ಅವನು ಎಲ್ಲವನ್ನು ಆಲಿಸುವವನೂ, ಎಲ್ಲದರ ಕುರಿತು ಅರಿವುಳ್ಳವನೂ ಆಗಿದ್ದಾನೆ." –ಎಂದು ಯಾರು ಮೂರು ಬಾರಿ ಹೇಳುತ್ತಾನೋ, ಅವನಿಗೆ ಬೆಳಿಗ್ಗಿನ ತನಕ ಹಠಾತ್ತನೆ ಬಂದೆರಗುವ ಯಾವುದೇ ಅಪಾಯವು ಬಾಧಿಸದು; ಹಾಗೂ ಯಾರಿದನ್ನು ಬೆಳಿಗ್ಗೆ ಮೂರು ಬಾರಿ ಹೇಳುತ್ತಾನೋ, ಅವನಿಗೆ ಸಂಜೆಯ ತನಕ ಹಠಾತ್ತನೆ ಬಂದೆರಗುವ ಯಾವುದೇ ಅಪಾಯವು ಬಾಧಿಸದು."[46]

8. ಇಬ್ನ್ ಉಮರ್ (رَضِيَ ٱللَّٰهُ عَنْهُمَا) ರವರು ಹೇಳಿದರು : ಅಲ್ಲಾಹುವಿನ ರಸೂಲ್ (صَلَّى ٱللَّٰهُ عَلَيْهِ وَسَلَّمَ) ರವರು ಯಾವಾಗಲೆಲ್ಲಾ ಸಂಜೆಯನ್ನು ತಲುಪುತ್ತಿದ್ದರೋ ಮತ್ತು ಯಾವಾಗಲೆಲ್ಲಾ ಮುಂಜಾನೆಯನ್ನು ತಲುಪುತ್ತಿದ್ದರೋ, ಆಗ ಅವರು ಈ ದುಆಗಳನ್ನು (ಹೇಳದೇ) ಬಿಡುತ್ತಿರಲಿಲ್ಲ :

---

46. ಅಬೂ ದಾವೂದ್ : 5088, ಶೈಖ್ ಅಲ್–ಅಲ್ಬಾನೀ (رَحِمَهُ ٱللَّٰهُ) ಸಹೀಹ್ ಎಂದು ಧೃಡೀಕರಿಸಿರುವರು.

www.AbuHammaad.Com

« اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ، اللَّهُمَّ إِنِّي أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ وَأَهْلِي وَمَالِي، اللَّهُمَّ اسْتُرْ عَوْرَاتِي وَآمِنْ رَوْعَاتِي، اللَّهُمَّ احْفَظْنِي مِنْ بَيْنِ يَدَيَّ، وَمِنْ خَلْفِي، وَعَنْ يَمِينِي، وَعَنْ شِمَالِي، وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي »

"ಓ ಅಲ್ಲಾಹ್! ಇಹಲೋಕದಲ್ಲೂ ಪರಲೋಕದಲ್ಲೂ (ಸಕಲ ಕೇಡುಗಳಿಂದ) ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ನಾನು ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ದೀನ್‌ನಲ್ಲೂ, ನನ್ನ ಐಹಿಕ ಜೀವನದಲ್ಲೂ, ನನ್ನ ಕುಟುಂಬ ಮತ್ತು ಸಂಪತ್ತಿನಲ್ಲೂ ಕ್ಷಮೆ, ಕ್ಷೇಮ ಮತ್ತು ರಕ್ಷಣೆಯನ್ನು ನಿನ್ನೊಡನೆ ಯಾಚಿಸುತ್ತೇನೆ. ಓ ಅಲ್ಲಾಹ್! ನನ್ನ ನ್ಯೂನತೆ ಮತ್ತು ತಪ್ಪುಗಳನ್ನು ಮರೆಮಾಡು ಮತ್ತು (ಸುರಕ್ಷತೆಯನ್ನು ನೀಡುವ ಮೂಲಕ) ನನ್ನ ಭಯವನ್ನು ನೀಗಿಸು. ಓ ಅಲ್ಲಾಹ್! ನನ್ನ ಮುಂದಿನಿಂದಲೂ ಹಾಗೂ ಹಿಂದಿನಿಂದಲೂ, ನನ್ನ ಬಲದಿಂದಲೂ ಹಾಗೂ ಎಡದಿಂದಲೂ, ನನ್ನ ಮೇಲಿನಿಂದಲೂ ನನ್ನನ್ನು ಸಂರಕ್ಷಿಸು. ನನ್ನ ಕೆಳಭಾಗದಿಂದ

ಹಠಾತ್ತನೇ (ಹಿಡಿಯಲ್ಪಟ್ಟು ಅಲಕ್ಷ್ಯನಾಗಿ) ನಾಶಹೊಂದುವುದರಿಂದ ನಿನ್ನ ಮಹಿಮೆಯೊಂದಿಗೆ ನಾನು ಅಭಯ ಯಾಚಿಸುತ್ತೇನೆ." [47]

9. (i) ಅಬೂ ಅಯ್ಯಾಶ್ (رَضِيَ ٱللَّهُ عَنْهُ) ರಿಂದ ವರದಿ :
ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು :

«لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ»

"ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನೂ ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು." ಎಂದು ಯಾರು ಬೆಳಿಗ್ಗಿನ ಹೊತ್ತು ಹೇಳುತ್ತಾನೋ, ಅದು ಅವನಿಗೆ (ಪ್ರವಾದಿ)

47. ಅಬೂ ದಾವೂದ್ : 5074, ಶೈಖ್ ಅಲ್-ಅಲ್ಬಾನೀ (رَحِمَهُ ٱللَّهُ) ಸಹೀಹ್ ಎಂದು ಧೃಡೀಕರಿಸಿರುವರು.

ಇಸ್ಮಾಈಲ್‌ರವರ ಸಂತತಿಯ ಓರ್ವ ದಾಸನನ್ನು ಸ್ವತಂತ್ರಗೊಳಿಸುವುದಕ್ಕೆ ಸಮಾನವಾಗಿರುವುದು, ಹಾಗೂ ಅವನಿಗಾಗಿ ಹತ್ತು ಸತ್ಕರ್ಮಗಳನ್ನು ಬರೆಯಲಾಗುವುದು, ಹಾಗೂ ಅವನಿಂದ ಹತ್ತು ಕೆಡುಕುಗಳನ್ನು ಅಳಿಸಲಾಗುವುದು, ಅವನನ್ನು (ಸ್ವರ್ಗದಲ್ಲಿ) ಹತ್ತು ದರ್ಜೆಗಳಷ್ಟು ಎತ್ತರಿಸಲಾಗುವುದು, ಹಾಗೂ ಅವನು ಸಂಜೆಯ ತನಕ ಶೈತಾನ್‌ನ ವಿರುದ್ಧ ಸಂರಕ್ಷಣೆಯಲ್ಲಿರುವನು; ಒಂದುವೇಳೆ ಇದನ್ನು ಅವನು ಸಂಜೆಯ ಹೊತ್ತು ಹೇಳಿದರೆ ಮುಂಜಾನೆಯವರೆಗೂ ಅವನಿಗೆ ಇದೇ ರೀತಿ (ಪ್ರತಿಫಲ) ದೊರಕುವುದು.” [48]

(ii) ಅಬೂ ಅಯ್ಯೂಬ್ (رَضِيَ ٱللَّهُ عَنْهُ) ರವರು ರೋಮ್‌ನ ರಾಜ್ಯದಲ್ಲಿರುವಾಗ ಅವರು ಹೇಳಿದರು, ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ಹೇಳಿದ್ದರು :

« لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ »

48. ಅಬೂ ದಾವೂದ್ : 5077, ಶೈಖ್ ಅಲ್-ಅಲ್ಬಾನೀ (رَحِمَهُ ٱللَّهُ) ಸಹೀಹ್ ಎಂದು ಧೃಡೀಕರಿಸಿರುವರು.

“ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನೂ ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು.” –ಎಂದು ಯಾರು ಬೆಳಿಗ್ಗೆ ಹತ್ತು ಬಾರಿ ಹೇಳುತ್ತಾನೋ, ಆಗ ಅವನಿಗಾಗಿ ಹತ್ತು ಸತ್ಕರ್ಮಗಳನ್ನು ಬರೆಯಲಾಗುವುದು, ಹಾಗೂ ಅವನಿಂದ ಹತ್ತು ಕೆಡುಕುಗಳನ್ನು ಅಳಿಸಲಾಗುವುದು, ಅದು ಅವನಿಗೆ ಹತ್ತು ದಾಸರನ್ನು ಸ್ವತಂತ್ರಗೊಳಿಸಿದಂತಾಗಿದೆ, ಹಾಗೂ ಅಲ್ಲಾಹು ಅವನನ್ನು ಶೈತಾನ್‌ನಿಂದ ರಕ್ಷಿಸುವನು; ಯಾರಿದನ್ನು ಸಂಜೆಯ ಹೊತ್ತು ಹೇಳುತ್ತಾನೋ, ಆಗ ಅವನಿಗೆ ಇದೇ ರೀತಿ (ಪ್ರತಿಫಲ) ದೊರಕುವುದು.” [49]

(iii) ಅಬ್ದುಲ್ಲಾಹ್ ಬಿನ್ ಅಮ್ರ್ ಬಿನ್ ಅಲ್–ಆಸ್ (رَضِيَ ٱللَّهُ عَنْهُمَا) ರಿಂದ ವರದಿ : ಪ್ರವಾದಿ (صَلَّى ٱللَّهُ عَلَيْهِ وَسَلَّمَ) ಹೇಳಿದರು :

49. ನಸಾಈ ತಮ್ಮ ಅಮಲ್ ಅಲ್–ಯೌಮ್ ವಲ್–ಲೈಲಃದಲ್ಲಿ : 24 ಶೈಖ್ ಅಲ್–ಅಲ್ಬಾನೀ (رَحِمَهُ ٱللَّهُ) ಸಹೀಹ್ ಎಂದು ಧೃಡೀಕರಿಸಿರುವರು (ಸಹೀಹ್ ಅತ್–ತರ್ಗೀಬ್ : 660)

«لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ»

"ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ, ಅವನು ಏಕೈಕನೂ ಅವನಿಗೆ ಸಹಭಾಗಿಗಳಾರೂ ಇಲ್ಲ. ಸಕಲ ಆಧಿಪತ್ಯವು ಅವನದ್ದೇ ಆಗಿದೆ, ಸರ್ವಸ್ತುತಿಗಳೂ ಅವನಿಗಾಗಿದೆ, ಹಾಗೂ ಎಲ್ಲದರ ಮೇಲೂ ಅವನು ಸಾಮರ್ಥ್ಯವುಳ್ಳವನಾಗಿರುವನು." – ಎಂದು ಯಾರು ಮುಂಜಾನೆ ಪ್ರವೇಶಿಸುವಾಗ ನೂರು ಬಾರಿ ಮತ್ತು ಸಂಜೆ ಪ್ರವೇಶಿಸುವಾಗ ನೂರು ಬಾರಿ ಹೇಳುತ್ತಾನೋ, ಇದಕ್ಕಿಂತಲೂ ಹೆಚ್ಚು ಶ್ರೇಷ್ಠವಾದುದನ್ನು ಹೇಳಿದವನ ಹೊರತುಪಡಿಸಿ ಇತರ ಯಾರೂ ಅವನಿಗಿಂತಲೂ ಹೆಚ್ಚು ಶ್ರೇಷ್ಠತೆಯೊಂದಿಗೆ ಬರಲಾರರು."[50]

---

50. ನಸಾಈ ತಮ್ಮ ಅಮಲ್ ಅಲ್–ಯೌಮ್ ವಲ್–ಲೈಲಃದಲ್ಲಿ : 75 ಶೈಖ್ ಅಲ್–ಅಲ್ಬಾನೀ (رحمه الله) ಸಿಲ್‌ಸಿಲಃ ಅಸ್ಸಹೀಹಃದಲ್ಲಿ (2762) ಹೇಳಿರುವರು : ಇದರ ಸನದ್ (ವರದಿಯ ಶೃಂಖಲೆಯು) 'ಹಸನ್' ಆಗಿದೆ.

10. ಅಬ್ದುಲ್ಲಾಹ್ ಬಿನ್ ಅಮ್ರ್ ಬಿನ್ ಅಲ್-ಆಸ್ (رَضِيَ ٱللَّهُ عَنْهُمَا) ರಿಂದ ವರದಿ : ಅಬೂ ಬಕ್ರ್ ಅಸ್ಸಿದ್ದೀಕ್ (رَضِيَ ٱللَّهُ عَنْهُ) ರವರು ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರೊಂದಿಗೆ ಹೇಳಿದರು : "ಓ ಅಲ್ಲಾಹುವಿನ ರಸೂಲರೇ! ನಾನು ಬೆಳಿಗ್ಗೆ ಪ್ರವೇಶಿಸಿದಾಗ ಮತ್ತು ಸಂಜೆ ಪ್ರವೇಶಿಸಿದಾಗ ಏನು ಹೇಳಬೇಕೆಂಬುದನ್ನು ತಾವು ನನಗೆ ಕಲಿಸಿಕೊಡಿ," ಆಗ ಅವರು (صَلَّى ٱللَّهُ عَلَيْهِ وَسَلَّمَ) ಹೇಳಿದರು : "ಓ ಅಬೂ ಬಕ್ರ್! ಹೇಳಿರಿ :

« اللَّهُمَّ فَاطِرَ السَّمَوَاتِ وَالأَرْضِ عَالِمَ الغَيْبِ وَالشَّهَادَةِ لَا إِلَهَ إِلَّا أَنْتَ رَبَّ كُلِّ شَيْءٍ وَمَلِيكَهُ، أَعُوذُ بِكَ مِنْ شَرِّ نَفْسِي، وَمِنْ شَرِّ الشَّيْطَانِ وَشِرْكِهِ، وَأَنْ أَقْتَرِفَ عَلَى نَفْسِي سُوءًا أَوْ أَجُرَّهُ إِلَى مُسْلِمٍ »

"ಓ ಅಲ್ಲಾಹ್! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಅಗೋಚರ ಹಾಗೂ ಗೋಚರವಾಗಿರುವುದರ ಕುರಿತು ಅರಿವುಳ್ಳವನೇ, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ. ಸಕಲ ವಸ್ತುಗಳ ಸೃಷ್ಟಿಕರ್ತನೂ, ಒಡೆಯನೂ, ಪರಿಪಾಲಕನೂ ಹಾಗೂ ಅವೆಲ್ಲದರ ಪರಮ ಅಧಿಪತಿಯೇ! ನನ್ನ

ಮನಸ್ಸಿನ ಕೆಡುಕಿನಿಂಲೂ ಮತ್ತು ಶೈತಾನ್‌ನ ಕೆಡುಕಿನಿಂದಲೂ ಹಾಗೂ ಅವನು ಆಹ್ವಾನ ನೀಡುವ ಶಿರ್ಕ್‌ನಿಂದಲೂ (ಅಲ್ಲಾಹುವಿನೊಂದಿಗೆ ಇತರರನ್ನು ಸಹಭಾಗಿಗಳಾಗಿ ಮಾಡಲು ಶೈತಾನ್ ನೀಡುವ ಕರೆಯಿಂದಲೂ); ನನ್ನ ಸ್ವಂತದ ವಿರುದ್ಧವೆಸಗುವ ಕೆಡುಕಿನಿಂದಲೂ ಅಥವಾ ಅದನ್ನು ಓರ್ವ ಮುಸ್ಲಿಮ್‌ನ ಮೇಲೆ ಎಸಗುವುದರಿಂದಲೂ ನಾನು ನಿನ್ನಲ್ಲಿ ಅಭಯ ಯಾಚಿಸುತ್ತೇನೆ."[51]

11. ಅನಸ್ ಬಿನ್ ಮಾಲಿಕ್ (رَضِيَ ٱللَّهُ عَنْهُ) ರಿಂದ ವರದಿ : ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಫಾತಿಮಾ (رَضِيَ ٱللَّهُ عَنْهَا) ರೊಂದಿಗೆ ಹೇಳಿದರು : ಯಾವುದನ್ನು ನಾನು ನಿನಗೆ ಸಲಹೆ ನೀಡಿರುವೆನೋ ಅದನ್ನು ಆಲಿಸುವುದರಿಂದ ಅಥವಾ ನೀನು ಬೆಳಿಗ್ಗೆ ಪ್ರವೇಶಿಸಿದಾಗ ಮತ್ತು ಸಂಜೆ ಪ್ರವೇಶಿಸಿದಾಗ :

« يَا حَيُّ يَا قَيُّومُ بِرَحْمَتِكَ أَسْتَغِيثُ، أَصْلِحْ لِي شَأْنِي كُلَّهُ، وَلَا تَكِلْنِي إِلَى نَفْسِي طَرْفَةَ عَيْنٍ »

---

51. ಅತ್ತಿರ್ಮಿದೀ : 3529, ಶೈಖ್ ಅಲ್-ಅಲ್ಬಾನೀ (رَحِمَهُ ٱللَّهُ) ಸಿಲ್‌ಸಿಲಃ ಅಸ್ಸಹೀಹಃದಲ್ಲಿ (2763) ಇದನ್ನು ಸಹೀಹ್ ಎಂದು ಧೃಡೀಕರಿಸಿರುವರು.

“ಓ ಸದಾ ಜೀವಂತನಾಗಿರುವವನೇ! ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೇ (ಓ ಅಲ್ಲಾಹ್)! ನಿನ್ನ ಕಾರುಣ್ಯದೊಂದಿಗೆ ನಾನು ಸಹಾಯ ಯಾಚಿಸುತ್ತಿದ್ದೇನೆ. ನನ್ನ ಸರ್ವ ಕಾರ್ಯಗಳನ್ನು ನನಗೆ ನೀನು ಸರಿಪಡಿಸು, ಕಣ್ಣಿನ ಮಿಟುಕಿನಷ್ಟು ಕ್ಷಣವೂ ಸ್ವತಃ ನನ್ನನ್ನೇ ನಾನು ಅವಲಂಬಿಸುವಂತೆ ನೀನು ಮಾಡದಿರು.” – ಎಂದು ಹೇಳುವುದರಿಂದ ನಿನ್ನನ್ನು ತಡೆಯುವುದಾದರೂ ಏನು? [52]

12. ಅಬೂ ಹುರೈರಃ (رَضِيَ اللَّهُ عَنْهُ) ರಿಂದ ವರದಿ : ಅಲ್ಲಾಹುವಿನ ರಸೂಲ್ (صَلَّى اللَّهُ عَلَيْهِ وَسَلَّمَ) ರವರು ಹೇಳಿದರು : ಯಾವಾಗ ನಿಮ್ಮ ಪೈಕಿ ಓರ್ವನು ಮುಂಜಾನೆಯನ್ನು ಪ್ರವೇಶಿಸುವನೋ, ಆಗ ಅವನು (ಈ ರೀತಿ) ಮೂರು ಬಾರಿ ಹೇಳಲಿ :

« أَصْبَحْتُ أُثْنِي عَلَيْكَ حَمْدًا، وَأَشْهَدُ أَنْ لَا إِلَهَ إِلَّا اللهُ »

52. ನಸಾಈ ತಮ್ಮ ಅಮಲ್ ಅಲ್–ಯೌಮ್ ವಲ್–ಲೈಲಃದಲ್ಲಿ : 570 ಶೈಖ್ ಅಲ್–ಅಲ್ಬಾನೀ (رَحِمَهُ اللَّهُ) ಹಸನ್ ಎಂದು ವ್ಯಕ್ತಪಡಿಸಿರುವರು (ಸಹೀಹ್ ಅತ್–ತರ್‌ಗೀಬ್ : 661)

“ನಿನ್ನನ್ನು ಪ್ರಶಂಸಿಸುತ್ತಾ ನಾನು ಮುಂಜಾನೆಯನ್ನು ಪ್ರವೇಶಿಸಿದೆನು, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುವೆನು.” ಮತ್ತು ಯಾವಾಗ ಆತನು ಸಂಜೆಯನ್ನು ಪ್ರವೇಶಿಸುತ್ತಾನೋ ಆಗ ಅವನು ಅದರಂತೆಯೇ ಹೇಳಲಿ :

« أَمْسَيْتُ أُثْنِي عَلَيْكَ حَمْدًا، وَأَشْهَدُ أَنْ لَا إِلَهَ إِلَّا اللهُ »

“ನಿನ್ನನ್ನು ಪ್ರಶಂಸಿಸುತ್ತಾ ನಾನು ಸಂಜೆಯನ್ನು ಪ್ರವೇಶಿಸಿದೆನು, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುವೆನು.” [53]

---

53. ನಸಾಈ ತಮ್ಮ ಅಮಲ್ ಅಲ್-ಯೌಮ್ ವಲ್-ಲೈಲಃದಲ್ಲಿ : 571 ಶೈಖ್ ಮುಕ್ಬಿಲ್ (رحمه الله) ತಮ್ಮ ಜಾಮಿಉಸ್ಸಹೀಹ್ ಮಿಮ್ಮಾ ಲೈಸ ಫಿಸ್-ಸಹೀಹೈನ್‌ನಲ್ಲಿ (2/532) – ಇದನ್ನು ‘ಹಸನ್’ ಎಂದು ವ್ಯಕ್ತಪಡಿಸಿರುವರು.

13. ಉಬಯ್ಯ್ ಬಿನ್ ಕಅ್‌ಬ್ (رَضِيَ ٱللَّٰهُ عَنْهُ) ರಿಂದ ವರದಿ : ಅವರಿಗೊಂದು ಖರ್ಜೂರ ಒಣಗಿಸುವ ಸ್ಥಳವಿತ್ತು, ಅವುಗಳು (ಖರ್ಜೂರಗಳು) ಕಡಿಮೆಯಾಗುತ್ತಿರುವುದನ್ನು ಅವರು ಕಂಡರು, ಹೀಗಾಗಿ ಅವರು ಒಂದು ರಾತ್ರಿ ಅವುಗಳಿಗೆ ಕಾವಲು ನಿಂತರು, ಆ ವೇಳೆ ಪ್ರೌಢಾವಸ್ಥೆಯ ಬಾಲಕನನ್ನು ಹೋಲುವ ಒಂದು ಜೀವಿಯನ್ನು ಅವರು ಕಂಡುಕೊಂಡರು, ಅವರು ಅವನಿಗೆ ಸಲಾಮ್‌ಅನ್ನು ಹೇಳಿದರು ಅವನು ಸಲಾಮ್‌ಗೆ ಉತ್ತರಕೊಟ್ಟನು. ಅವರು ಹೇಳಿದರು : ನೀನು ಯಾರು? : ಜಿನ್ನೋ ಅಥವಾ ಮನುಷ್ಯನೋ? ಅವನು ಹೇಳಿದನು : ಅಲ್ಲ. ನಾನೋರ್ವ ಜಿನ್ನ್ ಆಗಿರುವೆನು. ಅವರು ಹೇಳಿದರು : "ನಿನ್ನ ಕೈಯನ್ನು ನನಗೆ ಚಾಚು" ಹಾಗೂ ಅದು ನಾಯಿಯ ಪಂಜವಾಗಿರುವುದನ್ನೂ ಮತ್ತು ನಾಯಿಯ ಕೂದಲಾಗಿರುವುದನ್ನೂ ಕಂಡುಕೊಂಡರು. ಅವರು ಹೇಳಿದರು : ಇದು ಜಿನ್ನ್‌ನ ಮೈಕಟ್ಟಾಗಿದೆಯೇ? ಅವನು ಹೇಳಿದನು : "ನನಗಿಂತಲೂ ಶಕ್ತಿಶಾಲಿಯಾದ ಓರ್ವ ಗಂಡಸು ಅವರಲ್ಲಿ ಇಲ್ಲ ಎಂಬುದು ಜಿನ್ನ್‌ಗಳಿಗೆ ತಿಳಿದಿದೆ. ಅವರು ಹೇಳಿದರು : ನೀನು ಏನು ಮಾಡುತ್ತಿದ್ದೀಯಾ? ಅವನು ಹೇಳಿದನು : "ನೀವು ದಾನ ನೀಡುವುದನ್ನು ಇಷ್ಟಪಡುವ ವ್ಯಕ್ತಿಯಾಗಿರುವಿರಿ ಎಂದು ನನಗೆ ತಿಳಿಸಲಾಗಿದೆ, ಹಾಗಾಗಿ ನಿಮ್ಮ ಆಹಾರದ ಒಂದು ಪಾಲನ್ನು ಪಡೆದುಕೊಳ್ಳಲು ನಾವು

ಬಯಸಿದೆವು." ಅವರು ಹೇಳಿದರು : ನಿಮ್ಮಿಂದ ಯಾವುದು ನಮ್ಮನ್ನು ರಕ್ಷಿವುದು? ಅವನು ಹೇಳಿದನು : ಸೂರಃ ಅಲ್-ಬಕರಃದಲ್ಲಿರುವ ಈ ಆಯತ್ :

﴿ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا تَأۡخُذُهُۥ سِنَةٞ وَلَا نَوۡمٞۚ لَّهُۥ مَا فِي
ٱلسَّمَٰوَٰتِ وَمَا فِي ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا بِإِذۡنِهِۦۚ يَعۡلَمُ مَا بَيۡنَ
أَيۡدِيهِمۡ وَمَا خَلۡفَهُمۡۖ وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا شَآءَۚ وَسِعَ كُرۡسِيُّهُ
ٱلسَّمَٰوَٰتِ وَٱلۡأَرۡضَۖ وَلَا يَـُٔودُهُۥ حِفۡظُهُمَاۚ وَهُوَ ٱلۡعَلِيُّ ٱلۡعَظِيمُ ٢٥٥﴾

"ಅಲ್ಲಾಹು, ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ; ಅವನು ಸದಾ ಜೀವಿಸುವವನೂ ಸ್ವಯಂ ಅಸ್ತಿತ್ವದಲ್ಲಿರುವವನೂ ಇತರೆಲ್ಲರಿಗೂ ಜೀವನಾಧಾರವನ್ನು ಒದಗಿಸುವವನೂ ಆಗಿರುವನು. ತೂಕಡಿಕೆಯಾಗಲೀ ನಿದ್ರೆಯಾಗಲೀ ಅವನನ್ನು ಬಾಧಿಸದು. ಆಕಾಶಗಳಲ್ಲಿರುವುದೂ ಭೂಮಿಯಲ್ಲಿರುವುದೂ (ಸಕಲವೂ) ಅವನಿಗೆ ಸೇರಿದ್ದಾಗಿದೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸು ಮಾಡುವವನು ಯಾರು? ಅವರ ಮುಂದಿರುವ ಹಾಗೂ ಅವರ

ಹಿಂದಿರುವ (ಹಿಂದೆ ನಡೆದು ಹೋಗಿರುವ ಹಾಗೂ ಮುಂದೆ ಸಂಭವಿಸಲಿರುವ) ಸಕಲವನ್ನೂ ಅವನು ಅರಿಯುತ್ತಾನೆ, ಅವನು ಏನನ್ನು (ಕಲಿಸಿಕೊಡಲು) ಇಚ್ಚಿಸುತ್ತಾನೋ ಅದರ ಹೊರತು ಅವನ ಅರಿವಿನಿಂದ ಯಾವುದನ್ನೂ ಅವರು ಅರಿಯಲಾರರು. ಅವನ ಕುರ್ಸೀ (ಅಲ್ಲಾಹುವಿನ ಎರಡು ಪಾದಗಳ ಸ್ಥಳ) ಆಕಾಶಗಳ ಮತ್ತು ಭೂಮಿಯ ಮೇಲೆ ವ್ಯಾಪಿಸಿಕೊಂಡಿದೆ, ಅವೆರಡನ್ನು (ಆಕಾಶಗಳು ಮತ್ತು ಭೂಮಿಯನ್ನು) ಸಂರಕ್ಷಿಸುವುದು ಅವನಿಗೆ ಹೊರೆಯಾಗದು. ಅವನು ಪರಮೋನ್ನತನೂ ಅತ್ಯುನ್ನತ ಮಹಿಮೆಯನ್ನು ಹೊಂದಿರುವವನೂ ಆಗಿರುವನು."

ಒಂದುವೇಳೆ ನೀನಿದನ್ನು ಮುಂಜಾನೆಯ ವೇಳೆ ಹೇಳಿದರೆ ಸಂಜೆಯವರೆಗೂ ನಮ್ಮಿಂದ ನೀನು ಸುರಕ್ಷಿತನಾಗಿರುವೆ ಹಾಗೂ ಒಂದುವೇಳೆ ನೀನಿದನ್ನು ಸಂಜೆಯ ವೇಳೆ ಹೇಳಿದರೆ ಮುಂಜಾನೆಯವರೆಗೂ ನಮ್ಮಿಂದ ನೀನು ಸುರಕ್ಷಿತನಾಗಿರುವೆ." ಹೀಗೆ ಮರುದಿನ ಅವರು ಪ್ರವಾದಿ (ﷺ) ರವರ ಬಳಿಗೆ ಹೊರಟರು ಮತ್ತು ಆತನ ಸಮಾಚಾರವನ್ನು ಅವರಿಗೆ ತಿಳಿಸಿದರು.

ಅವರು (ﷺ) ಹೇಳಿದರು : “ದುಷ್ಟನು ಸತ್ಯವನ್ನು ನುಡಿದಿದ್ದಾನೆ.” [54]

14. ಅಬ್ದುರ್ರಹ್ಮಾನ್ ಬಿನ್ ಅಬ್‌ಝಾ (رَضِيَ ٱللَّهُ عَنْهُ) ರವರು ತಮ್ಮ ತಂದೆಯವರಿಂದ ವರದಿ ಮಾಡುತ್ತಾರೆ : ಅಲ್ಲಾಹುವಿನ ರಸೂಲ್ (ﷺ) ರವರು ಬೆಳಿಗ್ಗಿನ ಹೊತ್ತು (ಈ ರೀತಿ) ಹೇಳುತ್ತಿದ್ದರು :

« أَصْبَحْنَا عَلَى فِطْرَةِ الْإِسْلَامِ، وَكَلِمَةِ الْإِخْلَاصِ وَدِينِ نَبِيِّنَا مُحَمَّدٍ صَلَّى اللهُ عَلَيْهِ وَسَلَّمَ، وَمِلَّةِ أَبِينَا إِبْرَاهِيمَ، حَنِيفًا مُسْلِمًا وَمَا كَانَ مِنَ الْمُشْرِكِينَ »

“ನಾವು ಮುಂಜಾನೆಯನ್ನು ಪ್ರವೇಶಿಸಿದೆವು – ಇಸ್ಲಾಮ್‌ನ ನೈಜ ಧರ್ಮದಲ್ಲಿ, ಆರಾಧನೆಯನ್ನು (ಅಲ್ಲಾಹುವಿಗೆ ಮಾತ್ರ)

54. ನಸಾಈ ತಮ್ಮ ಅಮಲ್ ಅಲ್–ಯೌಮ್ ವಲ್–ಲೈಲಃದಲ್ಲಿ : 960, 961; ಶೈಖ್ ಅಲ್–ಅಲ್ಬಾನೀ (رَحِمَهُ ٱللَّهُ) ಸಹೀಹ್ ಎಂದು ಧೃಡೀಕರಿಸಿರುವರು (ಸಹೀಹ್ ಅತ್–ತರ್ಗೀಬ್ : 662)

ನಿಷ್ಕಳಂಕತೆಗೊಳಿಸುವ (ಲಾ ಇಲಾಹ ಇಲ್ಲಲ್ಲಾಹ್ ಎಂಬ ತೌಹೀದ್‌ನ) ಸಾಕ್ಷ್ಯವಚನದಲ್ಲಿ, ನಮ್ಮ ಪ್ರವಾದಿವರ್ಯರಾದ ಮುಹಮ್ಮದ್ (ﷺ) ರವರ ಧರ್ಮದಲ್ಲಿ, ನಮ್ಮ ಪೂರ್ವಜರಾದ ಇಬ್ರಾಹೀಮ್ (عَلَيْهِ السَّلَامُ) ರವರ ಮಾರ್ಗದಲ್ಲಿ– ಅವರು ಅಲ್ಲಾಹುವನ್ನು ಏಕಮಾತ್ರವಾಗಿ ಆರಾಧಿಸುವ ನೈಜ ಧರ್ಮದಲ್ಲಿದ್ದರು (ಇಸ್ಲಾಮ್‌ನಲ್ಲಿದ್ದರು) ಹಾಗೂ ಅವರು ಅಲ್ಲಾಹುವಿನೊಂದಿಗೆ ಆರಾಧನೆಯಲ್ಲಿ ಇತರರನ್ನು ಸಹಭಾಗಿಗಳಾಗಿ ಮಾಡುವವರ ಪೈಕಿ (ಮುಶ್ರಿಕ್‌ಗಳ ಪೈಕಿ) ಸೇರಿದವರಾಗಿರಲಿಲ್ಲ.” [55]

15. ಅಲ್–ಮುನೈದಿರ್ (رَضِيَ ٱللَّهُ عَنْهُ) ಹೇಳಿದರು : ಅಲ್ಲಾಹುವಿನ ರಸೂಲ್ (ﷺ) ರವರು ಹೇಳುವುದನ್ನು ನಾನು ಆಲಿಸಿರುವೆನು : ಮುಂಜಾನೆಯನ್ನು ಪ್ರವೇಶಿಸುವಾಗ ಯಾರು (ಈ ರೀತಿ) ಹೇಳುತ್ತಾನೋ :

« رَضِيتُ بِاللهِ رَبًّا، وَبِالْإِسْلَامِ دِينًا، وَبِمُحَمَّدٍ نَبِيًّا »

55. ನಸಾಈ ತಮ್ಮ ಅಮಲ್ ಅಲ್–ಯೌಮ್ ವಲ್–ಲೈಲಃದಲ್ಲಿ : 1, 2 ಮತ್ತು 3; ಇಬ್ನ್ ಅಸ್–ಸುನ್ನೀ : 34

"ಅಲ್ಲಾಹು ನನ್ನ ರಬ್ಬ್‌ಆಗಿಯೂ, ಇಸ್ಲಾಮ್ ನನ್ನ ಧರ್ಮವಾಗಿಯೂ ಹಾಗೂ ಮುಹಮ್ಮದ್ ನನ್ನ ಪ್ರವಾದಿಯಾಗಿಯೂ ನಾನು ಸಂತೃಪ್ತನಾಗಿರುವೆನು." –ಹಾಗಾದರೆ ಅವನನ್ನು ನಾನು ಸ್ವರ್ಗಕ್ಕೆ ಪ್ರವೇಶಿಸುವವರೆಗೂ ಅವನ ಕೈಹಿಡಿದುಕೊಳ್ಳುವುದಾಗಿ ನಾನು ಖಾತರಿ ನೀಡುತ್ತೇನೆ. [56]

16. ಉಮ್ಮು ಸಲಮಃ (رَضِيَ ٱللَّهُ عَنْهَا) ಹೇಳಿದರು : ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಸುಬ್‌ಹಿ ನಮಾಝ್ ನಿರ್ವಹಿಸಿ ಸಲಾಮ್ ಹೇಳಿದ ಬಳಿಕ (ಈ ರೀತಿ) ಹೇಳುತ್ತಿದ್ದರು :

« اللَّهُمَّ إِنِّي أَسْأَلُكَ عِلْمًا نَافِعًا، وَرِزْقًا طَيِّبًا، وَعَمَلًا مُتَقَبَّلًا »

---

56. ಅತ್ತಬರಾನೀ : ಅಲ್–ಮುಅ್‌ಜಮ್ ಅಲ್– ಕಬೀರ್ : 20/355 ಸಂಖ್ಯೆ 838; ಶೈಖ್ ಅಲ್–ಅಲ್ಬಾನೀ (رَحِمَهُ ٱللَّهُ) 'ಹಸನ್ ಲಿಗೈರಿಹಿ' ಎಂದು ವ್ಯಕ್ತಪಡಿಸಿರುವರು (ಸಹೀಹ್ ಅತ್–ತರ್‌ಗೀಬ್ : 667, ಅಸ್ಸಹೀಹಃ : 2686)

“ಓ ಅಲ್ಲಾಹ್! ಪ್ರಯೋಜನಕಾರಿಯಾದ ಇಲ್ಮ್‌ಅನ್ನೂ, ಉತ್ತಮ ಮತ್ತು ಶುದ್ಧವಾದ ಅನ್ನಾಧಾರವನ್ನೂ, (ನಿನ್ನಿಂದ) ಸ್ವೀಕಾರವಾಗುವ ಕರ್ಮವನ್ನೂ ನಾನು ನಿನ್ನೊಂದಿಗೆ ಯಾಚಿಸುತ್ತೇನೆ.” [57]

17. ಅಬೂ ಹುರೈರಃ (رَضِيَ ٱللَّهُ عَنْهُ) ರಿಂದ ವರದಿ : ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು :

« أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ »

“ಅಲ್ಲಾಹುವಿನ ಪರಿಪೂರ್ಣ ವಚನಗಳೊಂದಿಗೆ ಅವನು ಸೃಷ್ಟಿಸಿದವುಗಳ ಕೇಡಿನಿಂದ ನಾನು ಅಭಯಯಾಚಿಸುತ್ತೇನೆ – ಎಂದು ಯಾರು ಸಂಜೆಯ ಹೊತ್ತು ಮೂರು ಬಾರಿ ಹೇಳುತ್ತಾನೋ, ಅವನು ಆ ರಾತ್ರಿ ವಿಷಕಾರಿ (ಜಂತುಗಳ) ಕುಟುಕುಗಳಿಂದ ಹಾನಿಗೊಳಗಾಗಲಾರನು.” [58]

57. ಇಬ್ನ್ ಮಾಜಃ : 925

58. ಅತ್ತಿರ್ಮಿದೀ : 3604

18. ಅಬೂ ಹುರೈರಃ (رَضِيَٱللَّهُعَنْهُ) ರಿಂದ ವರದಿ : ಅಲ್ಲಾಹುವಿನ ರಸೂಲ್ (صَلَّىٱللَّهُعَلَيْهِوَسَلَّمَ) ರವರು ಹೇಳಿದರು : (ಓರ್ವ ದಾಸನು ನರಕಾಗ್ನಿಯಿಂದ ತನ್ನನ್ನು ರಕ್ಷಿಸಲು ದಿನದಲ್ಲಿ ಏಳು ಬಾರಿ (ಅಲ್ಲಾಹುವಿನಲ್ಲಿ) ಬೇಡಿದಾಗ ನರಕಾಗ್ನಿಯು : "ಓ ನನ್ನ ರಬ್ಬ್! ನಿನ್ನ ದಾಸನು ನನ್ನಿಂದ ರಕ್ಷಣೆಯನ್ನು ಬೇಡುತ್ತಿರುವನು, ಆದ್ದರಿಂದ ನೀನು ಅವನಿಗೆ ರಕ್ಷಣೆಯನ್ನು ನೀಡು" –ಎಂದು ಹೇಳದೇ ಇರುವುದಿಲ್ಲ. ಹಾಗೂ ಓರ್ವ ದಾಸನು ಅಲ್ಲಾಹುವಿನೊಂದಿಗೆ ಸ್ವರ್ಗವನ್ನು ದಿನದಲ್ಲಿ ಏಳು ಬಾರಿ ಯಾಚಿಸಿದಾಗ ಸ್ವರ್ಗವು : "ಓ ನನ್ನ ರಬ್ಬ್! ನಿನ್ನ ದಾಸನು ನನ್ನನ್ನು (ಪಡೆಯಲು) ಯಾಚಿಸುತ್ತಿರುವನು, ಹಾಗಾಗಿ ಅವನನ್ನು ಸ್ವರ್ಗಕ್ಕೆ ಪ್ರವೇಶಿಸು" –ಎಂದು ಹೇಳದೇ ಇರುವುದಿಲ್ಲ. [59]

59. ಅಬೂ ಯಅ್‌ಲಾ ತಮ್ಮ ಮುಸ್ನದ್‌ನಲ್ಲಿ : 6192; ಶೈಖ್ ಅಲ್ಬಾನೀ (رَحِمَهُٱللَّهُ) ಸಹೀಹ್ ಎಂದು ಧೃಡೀಕರಿಸಿರುವರು (ಅಸ್ಸಹೀಹಃ : 2506)

ಅಸ್ಸಲಫ್ ಅಸ್ಸಾಲಿಹ್ ಎಜುಕೇಶನಲ್ & ವೆಲ್‌ಫೇರ್ ಟ್ರಸ್ಟ್ (ರಿ)
ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ.
ದೂರವಾಣಿ : 9606627997
ಇ-ಮೇಲ್ : info@AbuHammaad.Com

AbuHammaad.Com